ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಲ್ಲನಪುರದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಶುಕ್ರವಾರ ನಡೆದ 2ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಭರ್ಜರಿ ಅರ್ಧ ಶತಕ (96 ರನ್)ಗಳಿಸಿದ ರಾಜಸ್ಥಾನ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ... ಆರ್‌ಆರ್ 214ಕ್ಕೆ 6 ವಿಕೆಟ್...

30 ಮೇ, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 80 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ತ್ರಿವಳಿ ಸವಾಲಿನ ನಡುವೆಯೂ ಬೆಳೆಯುತ್ತಿದೆ ಭಾರತದ ಆರ್ಥಿಕತೆ » 2



ಎಸ್‌ಐಆರ್: ಸುಳ್ಳು ಜನಾಭಿಪ್ರಾಯ ಮೂಡಿಸಲು ಅಪಪ್ರಚಾರ » 3



ಸಿದ್ದರಾಮಯ್ಯ ನಿಜವಾದ ಜನನಾಯಕ : ಜೈರಾಮ್ ರಮೇಶ್ ಶ್ಲಾಘನೆ » 4

# ಹೊಸ ಸರ್ಕಾರ ರಚನೆಗೆ ದೆಹಲಿಯಲ್ಲಿ ಕಸರತ್ತು

## ಇಂದು ಕಾಂಗ್ರೆಸ್ ಶಾಸಕಾಂಗ ಸಭೆ | ಸಂಪುಟ ಪುನರ್ ರಚನೆಗೆ ಸಿದ್ದರಾಮಯ್ಯ-ಡಿಕೆಶಿ ಕಾರ್ಯತಂತ್ರ

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ನೀಡಿದ್ದ ರಾಜೀನಾಮೆ ಅಂಗೀಕಾರ ಗೊಂಡು, ಸಚಿವ ಸಂಪುಟ ವಿಸರ್ಜನೆಗೊಂಡ ಬಳಿಕ ಹೊಸ ಸರ್ಕಾರ ರಚನೆಗೆ ದೆಹಲಿಯಲ್ಲಿ ಕಸರತ್ತು ನಡೆಯುತ್ತಿದೆ.

ನೂತನ ಮುಖ್ಯಮಂತ್ರಿ ಆಯ್ಕೆಗೆ ಶನಿವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾಂಗ್ರೆಸ್ ಶಾಸಕಾಂಗ ಸಭೆ ನಡೆಯಲಿದೆ. ಈ ಬಗ್ಗೆ ದೆಹಲಿಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಪರಸ್ಪರ ಚರ್ಚೆ ನಡೆಸಿ ಸಮಯ ನಿರ್ಧರಿಸಿದ್ದಾರೆ.

ಸಭೆಯ ಅಧ್ಯಕ್ಷತೆಯನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ವಹಿಸಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ವಿಧಾನ ಪರಿಷತ್ತಿನ ಸಭಾ ನಾಯಕ ಎನ್.ಎಸ್.ಬೋಸ್‌ರಾಜ್, ಕೆಪಿಸಿಸಿಯ ಎಲ್ಲಾ ಕಾರ್ಯಾಧ್ಯಕ್ಷರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಭೆಗೆ ಹಾಜರಾಗುವಂತೆ ವಿಧಾನಸಭೆ, ವಿಧಾನ ಪರಿಷತ್, ಲೋಕಸಭೆ ಹಾಗು ರಾಜ್ಯಸಭೆ ಸದಸ್ಯರು ಮತ್ತು ಬಾಹ್ಯ ಬೆಂಬಲಿತ ಸದಸ್ಯರಿಗೆ ಆಹ್ವಾನ ನೀಡಲಾಗಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಅಲ್ಲಮಪ್ರಭು ಪಾಟೀಲ್ ಅವರು ತಿಳಿಸಿದ್ದಾರೆ.



### ಸೋಮವಾರ ಪ್ರಮಾಣ ವಚನ ಸ್ವೀಕಾರ

ಸಿದ್ದರಾಮಯ್ಯ ಅವರು ರಾಜೀನಾಮೆ ಕೊಟ್ಟ ಬೆನ್ನಲ್ಲಿಯೇ ನೂತನ ಮುಖ್ಯಮಂತ್ರಿ ಆಯ್ಕೆ ಮತ್ತು ಪ್ರಮಾಣವಚನ ಸ್ವೀಕಾರದ ಸಿದ್ಧತೆಗಳು ನಡೆಯುತ್ತಿವೆ. ಬಹುತೇಕ ಸೋಮವಾರ ಗೋಧೂಳಿ ಸಮಯದಲ್ಲಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಗಳು ಹೆಚ್ಚಾಗಿವೆ. ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಪ್ರಮಾಣವಚನಕ್ಕೆ ಸಿದ್ಧತೆ ನಡೆಯುತ್ತಿದೆ. ಏಕಾಂಗಿಯಾಗಿ ಪ್ರಮಾಣವಚನ ಸ್ವೀಕರಿಸಲು ಡಿಕೆಶಿ ಆಸಕ್ತಿ ತೋರಿಸಿದ್ದು, ಉಪ ಮುಖ್ಯಮಂತ್ರಿ ಸೇರಿ 8 ಮಂದಿ ಪ್ರಮಾಣವಚನ ಸ್ವೀಕರಿಸಲು ಅವಕಾಶ ನೀಡಬೇಕೆಂಬ ಒತ್ತಡ ಹಿರಿಯ ನಾಯಕರಿಂದ ಕೇಳಿಬರುತ್ತಿದೆ. ಅಂತಿಮವಾಗಿ ರಾಹುಲ್ ಗಾಂಧಿ ನಿರ್ಧಾರದ ಮೇಲೆ ಎಲ್ಲವೂ ಅಂತಿಮವಾಗಲಿದೆ.

> **"ಶನಿವಾರ ಕಾಂಗ್ರೆಸ್ ಶಾಸಕಾಂಗ ಸಭೆ ಕರೆದಿದ್ದು, ಹೈಕಮಾಂಡ್ ನಾಯಕರು ವೀಕ್ಷಕರಾಗಿ ಬರಲಿದ್ದಾರೆ. ಹೀಗಾಗಿ ಯಾವುದೇ ಶಾಸಕರು ದೆಹಲಿಗೆ ಬರಬೇಡಿ ಎಂದು ಹೇಳಿದ್ದೇವೆ. ಕೆಲ ವಿಚಾರಗಳನ್ನು ಸಿದ್ದರಾಮಯ್ಯ ಅವರು ನಾವು ಚರ್ಚೆ ಮಾಡಿದ್ದೇವೆ. ಸಭೆ ಬಳಿಕ ಪ್ರಮಾಣ ವಚನಕ್ಕೆ ದಿನ ನಿಗದಿಯಾಗಲಿದೆ.**
> **-ಡಿ.ಕೆ.ಶಿವಕುಮಾರ್, ನಿಯೋಜಿತ ಮುಖ್ಯಮಂತ್ರಿ**

ಸಭೆಯಲ್ಲಿ ಉಪಮುಖ್ಯಮಂತ್ರಿಗಳ ಹುದ್ದೆ, ಸಂಪುಟ ಪುನರ್ ರಚನೆ, ಕೆಪಿಸಿಸಿ ಅಧ್ಯಕ್ಷ ಸ್ಥಾನ, ವಿಧಾನ ಪರಿಷತ್ ಹಾಗು ರಾಜ್ಯಸಭೆ ಚುನಾವಣೆಗಳಿಗೆ ಅಭ್ಯರ್ಥಿಗಳ ಆಯ್ಕೆ ವಿಚಾರ ಗಳು ಚರ್ಚೆಗೆ ಬರಲಿವೆ. ಶಾಸಕಾಂಗ ಸಭೆಯ ಬಳಿಕ ಡಿ.ಕೆ.ಶಿವಕುಮಾರ್ ಅವರು, ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚನೆಯ ಹಕ್ಕು ಪ್ರತಿಪಾದಿಸುವ ಸಾಧ್ಯತೆ ಇದೆ.

**ಇಬ್ಬರಿಂದಲೂ ಕಾರ್ಯತಂತ್ರ**

ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಸಂಭವನೀಯ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರೂ ದೆಹಲಿಯಲ್ಲಿ ತಮದೇ ಆದ ಕಾರ್ಯತಂತ್ರಗಳಲ್ಲಿ ತೊಡಗಿಸಿ ಕೊಂಡಿದ್ದಾರೆ.

ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿದ್ದ ಬಹಳಷ್ಟು ಜನರಿಗೆ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಸಚಿವರಾಗುವ ಅವಕಾಶ ಸಿಗುವುದು ಅನುಮಾನಾಸ್ಪದವಾಗಿದೆ. ಹೀಗಾಗಿ ಕೆಲವರು ದೆಹಲಿಯಲ್ಲಿ ಬೀಡುಬಿಟ್ಟು ಅವಕಾಶ ಗಿಟ್ಟಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಮೂಲಗಳ ಪ್ರಕಾರ ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದ ಡಾ.ಜಿ.ಪರಮೇಶ್ವರ್, ಕೆ.ಜೆ.ಜಾರ್ಜ್, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಹೆಚ್.ಕೆ.ಪಾಟೀಲ್, ಕೃಷ್ಣಬೈರೇಗೌಡ, ಚೆಲುವರಾಯಸ್ವಾಮಿ, ಈಶ್ವರ್ ಖಂಡ್ರೆ, ಶಿವರಾಜ ತಂಗಡಗಿ, ಲಕ್ಷ್ಮಿ ಹೆಬ್ಬಾಳ್ಕರ್, ಮಧು ಬಂಗಾರಪ್ಪ, ಡಾ.ಎಂ.ಸಿ.ಸುಧಾಕರ್ ಅವರು ಮುಂದುವರೆಯಲಿದ್ದಾರೆ ಎನ್ನಲಾಗುತ್ತಿದೆ.

ಕೆ.ಎನ್.ರಾಜಣ್ಣ, ಬಿ.ನಾಗೇಂದ್ರ ಈಗಾಗಲೇ ರಾಜೀನಾಮೆ ನೀಡಿದ್ದಾರೆ. ಡಿ.ಸುಧಾಕರ್ ಅಕಾಲಿಕ ನಿಧನವಾಗಿದ್ದಾರೆ. ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ » ನಾಲ್ಕನೇ ಪುಟದಲ್ಲಿ

## ಪ್ರಜಾಸೌಧದಲ್ಲಿ ಶಾಸಕರ ಕಚೇರಿ ಪ್ರಾರಂಭ



• ಪ್ರಜೋದಯ ವರದಿ

**ಹಾಸನ:** ನಗರದ ಬಿ.ಎಂ.ರಸ್ತೆ ಸಮೀಪ ನೂತನವಾಗಿ ನಿರ್ಮಾಣ ಗೊಂಡಿರುವ ಪ್ರಜಾ ಸೌಧದಲ್ಲಿ ಹಾಸನ ವಿಧಾನಸಭಾ ಕ್ಷೇತ್ರದ ಶಾಸಕರ ಕಚೇರಿಯನ್ನು ಶಾಸಕ ಹೆಚ್.ಪಿ.ಸ್ವರೂಪ್ ಅವರು ಪೂಜೆ ಸಲ್ಲಿಸುವ ಮೂಲಕ ಸಾರ್ವಜನಿಕ ಸೇವೆಗೆ ಚಾಲನೆ ನೀಡಿದರು.

ನೂತನ ಕಚೇರಿ ಉದ್ಘಾಟನೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾ ಸೌಧದಲ್ಲಿ ಶಾಸಕರ ಕಚೇರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿರುವುದು ಸಂತೋಷ ತಂದಿದೆ. ತಾಲ್ಲೂಕು ಕಚೇರಿ, ಎಡಿಆರ್ ಕಚೇರಿ, ಸರ್ವೆ ಇಲಾಖೆ ಸೇರಿ ಹಲವು ಪ್ರಮುಖ ಸರ್ಕಾರಿ ಕಚೇರಿಗಳು ಒಂದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ಒಂದೇ ಸ್ಥಳದಲ್ಲಿ ಸೇವೆಗಳು ದೊರೆಯಲಿವೆ ಎಂದು ತಿಳಿಸಿದರು.

ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವ ಉದ್ದೇಶದಿಂದ ಈ ಕಚೇರಿ ಆರಂಭಿಸಲಾಗಿದೆ. ಗ್ರಾಮೀಣ ಭಾಗದ ರೈತರು ಮತ್ತು ಸಾರ್ವಜನಿಕರು ಅನಗತ್ಯವಾಗಿ ಕಚೇರಿಗಳೆಲ್ಲಾ ಅಲೆದಾಡುವ ಪರಿಸ್ಥಿತಿ ಕಡಿಮೆಯಾಗಲಿದೆ. ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ, ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಶೀಘ್ರ ಪರಿಹಾರ ನೀಡುವುದು ತಮ್ಮ ಗುರಿಯಾಗಿದೆ ಎಂದು ಹೇಳಿದರು.

ತಹಶೀಲ್ದಾರ್ ಗೀತಾ, ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಸಿ. ಕ್ರಾಂತಿ ಪ್ರಸಾದ್ ತ್ಯಾಗಿ, ಗಿರೀಗೌಡ, ಬಿದರಿಕೆರೆ ಜಯರಾಮ್, ಹೊಂಗೆರೆ ರಘು ಸೇರಿ ಪಕ್ಷದ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

# ಮುಖ್ಯಮಂತ್ರಿ ಯಾರಾದರೆ ನಮಗೇನು

## ಜಿಲ್ಲೆಗೆ ಸಿದ್ದರಾಮಯ್ಯ ಕೊಡುಗೆ ಶೂನ್ಯ: ಶಾಸಕ ಹೆಚ್.ಪಿ.ಸ್ವರೂಪ್ ಅಸಮಾಧಾನ

• ಪ್ರಜೋದಯ ವರದಿ

**ಹಾಸನ :** ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷವಾಗಿದ್ದು, ಜಿಲ್ಲೆಗೆ ಸಿದ್ದರಾಮಯ್ಯ ಅವರ ಕೊಡುಗೆ ಶೂನ್ಯವೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ಶುಕ್ರವಾರ ತಾಲ್ಲೂಕು ಕಚೇರಿ ಪ್ರಜಾಸೌಧದಲ್ಲಿ ಶಾಸಕರ ಕಚೇರಿಗೆ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೆ, ಜಿಲ್ಲೆಗೆ ಯಾವುದೇ ಕೊಡುಗೆ ನೀಡಿಲ್ಲ. ಕಾಂಗ್ರೆಸ್ ಸರ್ಕಾರದಲ್ಲಿ ಯಾರು ಮುಖ್ಯಮಂತ್ರಿಯಾದರೆ ನಮಗೇನು. ಜಿಲ್ಲೆಗೆ ಅದರಲ್ಲೂ ಹಾಸನ ವಿಧಾನ ಸಭಾ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಕೊಟ್ಟರೆ ತುಂಬಾ ಸಂತೋಷ. ಮುಖ್ಯಮಂತ್ರಿ ಬದಲಾವಣೆ ಅವರ ಪಕ್ಷಕ್ಕೆ ಬಿಟ್ಟ ವಿಚಾರ ಎಂದರು.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದರೆ ಜಿಲ್ಲೆಗೆ ಯಾವ ರೀತಿ ಕೊಡುಗೆ ನೀಡುತ್ತಾರೆ



ನೋಡೋಣ. ನಮ್ಮ ಜೆಡಿಎಸ್ ಪಕ್ಷ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಮಲ್ಟಿ ಸ್ಪೆಷಲಿಟಿ ಆಸ್ಪತ್ರೆ ಸೇರಿ ಇನ್ನೂ ಹಲವು ಅಭಿವೃದ್ಧಿ ಕಾರ್ಯಗಳು ಆಗಿವೆ. ಆದರೆ ಉದ್ಘಾಟನೆ ಮಾಡಿದ್ದು ಮಾತ್ರ ಸಿದ್ದರಾಮಯ್ಯ ಅವರು. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದ ಮೇಲೆ ಏನು ಮಾಡುತ್ತಾರೆ ಕಾದು ನೋಡೋಣ. ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಅನುದಾನ, ಮೂಲಸೌಕರ್ಯ ಹಾಗೂ ಜನಪರ ಯೋಜನೆಗಳು ಬರಬೇಕು. ಅದನ್ನು ನೀಡುವ ನಾಯಕನೇ ಜನರಿಗೆ ಮುಖ್ಯ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕಾರ್ಯ ಕುರಿತು ಪ್ರಶ್ನಿಸಿದ ಅವರು, ಜೆಡಿಎಸ್ ಆಡಳಿತದಲ್ಲಿ ಜಿಲ್ಲೆಗೆ ಅನೇಕ ಪ್ರಮುಖ ಯೋಜನೆಗಳು ಮಂಜೂರಾಗಿದ್ದವು. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸೇರಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ನಾವು ಅಡಿಪಾಯ ಹಾಕಿದ್ದೇವೆ. ಆದರೆ, ಉದ್ಘಾಟನೆ ಮಾಡುವ ವೇಳೆ ಮಾತ್ರ ಕಾಂಗ್ರೆಸ್ ನಾಯಕರು ಮುಂದೆ ಬರುತ್ತಾರೆಂದರು. ಜಿಲ್ಲೆಯ ಜನರಿಗೆ ರಾಜಕೀಯ ಪೈ ಪೋಟಿಗಿಂತ ಅಭಿವೃದ್ಧಿಯೇ ಮುಖ್ಯ. ಜಿಲ್ಲೆ ರಾಜ್ಯದಲ್ಲಿ ರಾಜಕೀಯವಾಗಿ ಪ್ರಮುಖ ಸ್ಥಾನ ಹೊಂದಿದ್ದರೂ, ಆಳುವ ಸರ್ಕಾರಗಳು ನಿರೀಕ್ಷಿತ ಪ್ರಮಾಣದಲ್ಲಿ ಜಿಲ್ಲೆಯತ್ತ ಗಮನ ಸಿಗುತ್ತಿಲ್ಲ. ಮುಂದಿನ ದಿನಗಳಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಯಾರು ನಿಜವಾಗಿ ಕೆಲಸ ಮಾಡುತ್ತಾರೆಂಬುದನ್ನು ಜನರು ಗಮನಿಸುತ್ತಿದ್ದಾರೆಂದು ಹೇಳಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಹೆಚ್.ಎಸ್.ವಾಸುದೇವ್, ಸಿ.ಕ್ರಾಂತಿ ಪ್ರಸಾದ್‌ತ್ಯಾಗಿ, ಗಿರೀಗೌಡ, ಬಿದರಿಕೆರೆ ಜಯರಾಮ್, ಜಿಲ್ಲಾ ಜೆಡಿಎಸ್ ವಕ್ತಾರ ಹೊಂಗೆರೆ ರಘು ಮೊದಲಾದವರಿದ್ದರು.

# ಸಚಿವ ಸ್ಥಾನಕ್ಕಾಗಿ ಶಿವಲಿಂಗೇಗೌಡ ದೆಹಲಿ ಯಾತ್ರೆ

## ಕಾಂಗ್ರೆಸ್ ಹೈಕಮಾಂಡ್ ನಾಯಕರ ಭೇಟಿ | ಆಪ್ತರ ಮೂಲಕ ಒತ್ತಡ ಹೇರುವ ತಂತ್ರ

• ಪ್ರಜೋದಯ ವರದಿ

**ಹಾಸನ:** ಡಿ.ಕೆ.ಶಿವಕುಮಾರ್ ನೇತೃತ್ವದ ಹೊಸ ಸಚಿವ ಸಂಪುಟದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ಕಾಂಗ್ರೆಸ್‌ನ ಹಲವು ಹಿರಿಯ ಶಾಸಕರು ದೆಹಲಿಯಲ್ಲಿ ಲಾಬಿ ಆರಂಭಿಸಿದ್ದಾರೆ. ಈ ನಡುವೆ ಕೆ.ಎಂ.ಶಿವಲಿಂಗೇಗೌಡ ಅವರು ಈ ಬಾರಿ ಹೇಗಾದರೂ ಸಚಿವರಾಗಲೇ ಬೇಕೆಂಬ ದೃಢ ನಿಲುವಿನೊಂದಿಗೆ ದೆಹಲಿಯಲ್ಲಿ ಹೈಕಮಾಂಡ್ ನಾಯ ಕರನ್ನು ಭೇಟಿಯಾಗಿ ತಮ್ಮ ಬೇಡಿಕೆ ಮುಂದಿಟ್ಟಿದ್ದಾರೆ.

ಹೈಕಮಾಂಡ್ ಮಟ್ಟದಲ್ಲಿ ತಮ್ಮ ಪರ ಒತ್ತಡ ಹೇರಲು ಆಪ್ತ ನಾಯ ಕರು, ಹಿರಿಯ ಕಾಂಗ್ರೆಸ್ ಮುಖಂ ಡರು ಹಾಗು ಪ್ರಭಾವಿ ವಲಯಗಳ ಮೂಲಕ ನಿರಂತರ ಸಂಪರ್ಕ ಸಾಧಿಸುವ ಕಸರತ್ತು ನಡೆಸಿದ್ದಾರೆ. ಈ ನಡುವೆ ಸಂಸದ ಶ್ರೇಯಸ್ ಪಟೇಲ್ ಅವರು ಕೂಡ ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಮಂತ್ರಿ ಸ್ಥಾನ ನೀಡುವಂತೆ ಒತ್ತಾಯಿಸಿ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.



**ದೆಹಲಿಯಲ್ಲಿ ಸಚಿವಾಕಾಂಕ್ಷಿಗಳ ದಂಡು**

ರಾಜ್ಯ ಕಾಂಗ್ರೆಸ್‌ನಲ್ಲಿ ಸಚಿವ ಸಂಪುಟ ಪುನರ್‌ರಚನೆ ಚರ್ಚೆ ಆರಂಭವಾದ ಬಳಿಕ 25ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತಿದ್ದಾರೆ. ಹಿರಿಯ ಶಾಸಕರು, ಮೊದಲ ಬಾರಿಗೆ ಆಯ್ಕೆಯಾದವರು, ಪ್ರಾದೇಶಿಕ ಹಾಗು ಜಾತಿ ಸಮೀಕರಣ ಆಧಾರದಲ್ಲಿ ಹಲವು ನಾಯಕರು ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸುತ್ತಿದ್ದಾರೆ.

ಈ ಬೆಳವಣಿಗೆಗಳ ನಡುವೆ ಶಿವಲಿಂಗೇಗೌಡ ಅವರು ತಮ್ಮ ಹಿರಿತನ, ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಅನುಭವ, ವಾಕ್ಚಾತುರ್ಯ ಹಾಗು ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ನೀಡಿದ ಬಲವನ್ನು ಪ್ರಮುಖ ಅಸ್ತ್ರವಾಗಿಸಿಕೊಂಡು ಸಚಿವ ಸ್ಥಾನಕ್ಕಾಗಿ ಬಲವಾದ ಪೈಪೋಟಿ ನಡೆಸುತ್ತಿದ್ದಾರೆ.

ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ಸಿಗುವ ಸಾಧ್ಯತೆಗಳ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆ ಜೋರಾಗಿದೆ. ಆದರೆ, ಅಂತಿಮ ನಿರ್ಧಾರ ಹೈಕಮಾಂಡ್ ಕೈಯಲ್ಲಿರುವುದರಿಂದ, ಅರಸೀಕೆರೆ ಶಾಸಕನ ದೆಹಲಿ ರಾಜಕೀಯ ಯತ್ನ ಎಷ್ಟರ ಮಟ್ಟಿಗೆ ಫಲ ಕೊಡುತ್ತದೆ ಎಂಬುದು ಕಾದು ನೋಡಬೇಕಾಗಿದೆ.

**ಮಂತ್ರಿ ಆಗುವ ಆಸೆ ಇದೆ**

ಈ ನಡುವೆ ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಎಂ.ಶಿವಲಿಂಗೇಗೌಡ ಅವರು, ಈ ಬಾರಿ ಸಚಿವ ಸ್ಥಾನ ಸಿಗುವ ವಿಶ್ವಾಸವನ್ನು ಬಹಿರಂಗವಾಗಿ ವ್ಯಕ್ತಪಡಿಸಿದರು. ನಾನು ಸಚಿವ ಸ್ಥಾನದ ಆಕಾಂಕ್ಷಿ ಅಲ್ಲವೆಂದರೆ ಅದು ಆತ್ಮವಂಚನೆ ಆಗುತ್ತದೆ. ನಾನು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದೇನೆ. ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಬಂದ ನಂತರವೂ ಗೆಲುವು ಸಾಧಿಸಿದ್ದೇನೆ. 2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆಂಬ ವಿಶ್ವಾಸದಿಂದಲೇ ಪಕ್ಷಕ್ಕೆ ಬಂದಿದ್ದೆ ಎಂದು ಹೇಳಿದರು. ಸಿದ್ದರಾಮಯ್ಯ ಅವರು ರಾಜೀನಾಮೆ ಕೊಡುತ್ತಾರೆಂದು ನನಗೆ ಗೊತ್ತಿರಲಿಲ್ಲ, ಹೈಕಮಾಂಡ್ ಸೂಚನೆ ಮೇರೆಗೆ ರಾಜೀನಾಮೆ ನೀಡಿದ್ದಾರೆ. ಕೊಟ್ಟ ಮಾತಿಗೆ ತಪ್ಪದ, ನುಡಿದಂತೆ ನಡೆದಿರುವ ಅವರು ಒಬ್ಬ ಐತಿಹಾಸಿಕ ನಾಯಕ. ಹಾಗೆಯೇ ಹೈಕಮಾಂಡ್ ಸಹ ಅವರನ್ನು ನಡೆಸಿಕೊಂಡಿದೆ. ನೂತನ ಸಚಿವ ಸಂಪುಟದಲ್ಲಿ ಮಂತ್ರಿ ಆಗುವ ಆಸೆ ಇಟ್ಟುಕೊಂಡಿದ್ದೇನೆಂದು ಹೇಳಿದರು.

### ಸಚಿವ ಸ್ಥಾನ ಸಿಗುವ ವಿಶ್ವಾಸವಿದೆ: ಕೆ.ಎಂ.ಶಿ.

ಕಾಂಗ್ರೆಸ್ ಸೇರ್ಪಡೆಯ ಸಮಯದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿ ಮೂವರು ನಾಯಕರು ನಿನ್ನನ್ನು ಮಂತ್ರಿ ಮಾಡುತ್ತೇವೆಂದು ಮಾತು ಕೊಟ್ಟಿದ್ದರು. ಮೊದಲ ಅವಧಿಯಲ್ಲಿ ಅವಕಾಶ ಸಿಗಲಿಲ್ಲ. ಈ ಬಾರಿ ಸಚಿವ ಸ್ಥಾನ ಸಿಗುವ ವಿಶ್ವಾಸವಿದೆ ಎಂದು ಕೆ.ಎಂ.ಶಿವಲಿಂಗೇಗೌಡ ಅವರು ತಿಳಿಸಿದರು. ಇದೇ ವೇಳೆ ನಿಮಗೆ ಯಾವ ಖಾತೆ ಬೇಕೆಂಬ ಪತ್ರಕರ್ತರ ಪ್ರಶ್ನೆಗೆ ಮೊದಲು ಮಂತ್ರಿ ಮಾಡಲಿ, ನಂತರ ಖಾತೆ ಯಾವುದೆಂದು ನೋಡೋಣವೆಂದರು.

# ಜನ ಸ್ನೇಹಿ ಕೆಲಸ ಮಾಡಲು ಅಧಿಕಾರಿಗಳಿಗೆ ಸೂಚನೆ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯಿತಿ ಗಳಲ್ಲಿ ಇ-ಖಾತೆ ಮಾಡಿಕೊಡುವಲ್ಲಿ ಅಧಿ ಕಾರಿಗಳು ವಿನಃಕಾರಣ ಜನರನ್ನು ಅಲೆಸಿ, ಸತಾಯಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಈ ಧೋರಣೆ ಮುಂದುವರಿದರೇ ಕಾನೂನು ಕ್ರಮ ಎದುರಿಸಬೇಕಾ ಗುತ್ತದೆಂದು ಶಾಸಕ ಎ.ಮಂಜು ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ತಾಲ್ಲೂಕಿನ ಮಲ್ಲಿಪಟ್ಟಣ ಸಮುದಾಯ ಭವನದಲ್ಲಿ ಶುಕ್ರವಾರ ನಡೆದ ಹೋಬಳಿಮಟ್ಟದ ಜನಸ್ಪಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿಗಳಲ್ಲಿ ಮತ್ತು ಪಟ್ಟಣ ಪಂಚಾಯಿತಿಯಲ್ಲಿ ಚುನಾಯಿತ ಆಡಳಿತವಿಲ್ಲ. ಇಲಾಖೆ ಅಧಿಕಾರಿಗಳು ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಡಳಿತ ಸಂಪೂರ್ಣವಾಗಿ ಆಡಳಿತಾಧಿಕಾರಿ,



ಪಿಡಿಒಗಳಿಗೆ ಒಳಪಟ್ಟಿದೆ. ಇಲ್ಲಿ ಚುನಾಯಿತ ಸದಸ್ಯರ ವೈಯಕ್ತಿಕ ಒತ್ತಡವಿಲ್ಲ. ನಾನೂ ಕೂಡ ಇಂತಹವರಿಗೆ ಖಾತೆ ಮಾಡಿ ಕೊಡಿ ಎಂದು ಹೇಳಿಲ್ಲ. ಕಾನೂ ನಾತ್ಮಕವಾಗಿ ಇದ್ದರೇ ಅಂತವುಗಳನ್ನು ಕಾಲಮಿತಿಯೊಳಗೆ ಮಾಡಿಕೊಡಿ ಎಂದು ಹೇಳುವುದು ಜನರ ಪರವಾದ ನನ್ನ ಆಶಯವಾಗಿದೆ. ಬಹುತೇಕ ಇ-ಖಾತೆಗೆ ಬರುವುದು ಪೌತಿಖಾತೆ ಹಾಗೂ ಸರ್ಕಾರದ ಜಾಗದಲ್ಲಿ ಮನೆ ಕಟ್ಟಿಕೊಂಡಿರುವುದಾಗಿರುತ್ತದೆ. ಸರ್ಕಾರಿ ಜಾಗದಲ್ಲಿದ್ದರೇ ತಾಲ್ಲೂಕು ಆಡಳಿತ ಸ್ಥಳಕ್ಕೆ ಆಗಮಿಸಿ ಸರ್ವೆ ಮಾಡಿ ಗುರುತು ಮಾಡಿಕೊಟ್ಟ ಮೇಲೆ ಖಾತೆ ಮಾಡಬಹುದಾಗಿದೆ.ಅದೇ ರೀತಿ ಪೌತಿ ಖಾತೆ ಸಂಬಂಧ ಸೂಕ್ತ ದಾಖಲೆ ಪಡೆದು ಮಾಡಬೇಕಿದೆ. ಹೀಗಿದ್ದರೂ ಕೂಡ ಕಾಲಮಿತಿಯೊಳಗೆ ಖಾತೆಯನ್ನು ಮಾಡಿಕೊಡದೇ ಜನರನ್ನು ಅಲೆದಾಡಿಸುತ್ತಿರುವುದು ಅಧಿಕಾರಿ ಗಳಿಗೆ ಶೋಭೆತರುವುದಿಲ್ಲ. ಬಡವರ ಶಾಪಕ್ಕೆ ಒಳಗಾಗದೆ ಜನ ಸ್ನೇಹಿಯಾಗಿ ಕೆಲಸ ಮಾಡಿ ಎಂದು ಸೂಚನೆ ನೀಡಿದರು.

» 4ನೇ ಪುಟದಲ್ಲಿ

### ವಿದ್ಯುತ್ ಸಂಪರ್ಕ ಕಲ್ಪಿಸಿ

ಹಲವು ಗ್ರಾಮಗಳ ಜನರು ಜಮೀನು ಬಳಿ ಮನೆ ನಿರ್ಮಿಸಿಕೊಂಡು ವಾಸವಿದ್ದಾರೆ. ಅವರಿಗೆ ನಿರಂತರ ಜ್ಯೋತಿ ಸಂಪರ್ಕವಿಲ್ಲ. ಪಂಪ್ ಸೆಟ್ ಲೈನ್‌ನ ವಿದ್ಯುತ್ ಬೆಳಕಿನಲ್ಲಿ ಜೀವನ ಸಾಗಿಸುತ್ತಿರುವ ಬಗ್ಗೆ ದೂರುಬಂದಿದೆ. ಹೀಗೆ 4ರಿಂದ ಹೆಚ್ಚು ಮನೆಗಳಿರುವ ಕಡೆ ನಿರಂತರ ಜ್ಯೋತಿ ಸಂಪರ್ಕ ಕಲ್ಪಿಸಿ ಜನರ ಜೀವನಕ್ಕೆ ಅನುಕೂಲಮಾಡಿಕೊಡಬೇಕೆಂದು ಸೆಸ್ಕ್ ಇಂಜಿನೀಯರ್‌ಗಳಿಗೆ ಸೂಚನೆ ನೀಡಿದರು.

## ಸಿಡಿಲು ಬಡಿದು ರೈತ ಸಾವು

• ಪ್ರಜೋದಯ ವರದಿ

**ಹಾಸನ:** ಸಿಡಿಲು ಬಡಿದು ಗಂಭೀರವಾಗಿ ಗಾಯಗೊಂಡಿದ್ದ ರೈತ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಘಟನೆ ತಾಲ್ಲೂಕಿನ ಕೊಂಬನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಮಂಜರಾಜು (44) ಮೃತಪಟ್ಟ ರೈತ.

ಗುರುವಾರ ಸಂಜೆ ಜಮೀನಿನ ಬಳಿ ಕೆಲಸ ಮಾಡುತ್ತಿದ್ದ ವೇಳೆ ಸಿಡಿಲಾಘಾತ ಸಂಭವಿಸಿದ್ದು, ತೀವ್ರ ಅಸ್ವಸ್ಥಗೊಂಡಿದ್ದ ಮಂಜರಾಜ್ ಅವರನ್ನು ತಕ್ಷಣ ನಗರದ ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಅವರು ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದಿದ್ದಾರೆ. ಈ ಸಂಬಂಧ ದುದ್ದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಾಳೆ ಪತ್ರಿಕಾ ವಿತರಕರ ಪ್ರೀಮಿಯರ್ ಲೀಗ್

• ಪ್ರಜೋದಯ ವರದಿ

**ಹಾಸನ:** ಪತ್ರಿಕಾ ವಿತರಕರಿಗೆ ಮನರಂಜನೆ ಹಾಗು ಸೌಹಾರ್ದತೆಯ ವೇದಿಕೆಯಾಗುವ ಉದ್ದೇಶದಿಂದ ಹಾಸನಾಂಬ ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದಿಂದ ಮೊದಲ ಬಾರಿಗೆ ಪತ್ರಿಕಾ ವಿತರಕರ ಪ್ರೀಮಿಯರ್ ಲೀಗ್ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿಯನ್ನು ಮೇ 31ರಂದು ಆಯೋಜಿಸಲಾಗಿದೆ ಎಂದು ಸಂಘದ ಕಿರಣ್ ಹಾಗು ಸುನಿಲ್ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಸರ್ಕಾರಿ ಕಲಾ ಕಾಲೇಜು ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದೆ. ಬೆಳಿಗ್ಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಪಂದ್ಯಾವಳಿಗೆ ಚಾಲನೆ ನೀಡುವರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ಮಾಜಿ ಅಧ್ಯಕ್ಷರಾದ ಬಾಳ್ಳುಗೋಪಾಲ್, ರವಿ ನಾಕಲಗೂಡು ಅವರು ಭಾಗವಹಿಸಲಿದ್ದಾರೆ. ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ, ಕಾರ್ಮಿಕ ನಿರೀಕ್ಷಕ ಆನಂದ್ ರಾಮ್ ಪತ್ರಿಕಾ ವಿತರಕರನ್ನು ಸನ್ಮಾನಿಸಲಿದ್ದಾರೆಂದು ಹೇಳಿದರು.





ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನವಾಗಿ 20 ಸಾವಿರ, ದ್ವಿತೀಯ 15 ಸಾವಿರ, ತೃತೀಯ 10 ಸಾವಿರ, ನಾಲ್ಕನೇ ಸ್ಥಾನಕ್ಕೆ 10 ಸಾವಿರ ಹಾಗು ಐದನೇ ಸ್ಥಾನಕ್ಕೆ 5 ಸಾವಿರ ನಿಗದಿ ಪಡಿಸಲಾಗಿದೆ. ಸೌಹಾರ್ದ ಪಂದ್ಯಾವಳಿಯಲ್ಲಿ ರ್‍ಯಾಬಿಟ್‌ರನ್‌ರೈಡರ್ಸ್, ಹಾಸನ ವಾರಿಯರ್ಸ್, ಕರಿ ಚಿರತೆ ಚಾಲೆಂಜರ್ಸ್, ಲಯನ್ ಕ್ಯಾಪಿಟಲ್ಸ್ ಹಾಗು ವಿಕ್ಟರಿ ಫೋರ್ಸ್ ಸೇರಿ ಐದು ತಂಡಗಳು ಪಾಲ್ಗೊಳ್ಳಲಿದ್ದು, ಎಲ್ಲಾ ತಂಡಗಳಲ್ಲೂ ಪತ್ರಿಕಾ ವಿತರಕರೇ ಆಟಗಾರರಾಗಿ ಭಾಗವಹಿಸಲಿದ್ದಾರೆಂದರು. ಸುರೇಶ್, ಚೇತನ್, ಶ್ರೀಕಾಂತ್, ದಿನೇಶ್ ಇದ್ದರು.

## ಇಂದು ಹೆತ್ತೂರಿನಲ್ಲಿ ಪ್ರತಿಭಾ ಪುರಸ್ಕಾರ

• ಪ್ರಜೋದಯ ವರದಿ

**ಹೆತ್ತೂರು:** ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಘಟಕದ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮೇ 30ರಂದು ಬೆಳಿಗ್ಗೆ 10.30ಕ್ಕೆ ಹೋಬಳಿ ಬೆಳೆಗಾರರ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಹಾಗು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗು ಎಸ್‌ಎಸ್‌ಎಲ್‌ಸಿ ಕನ್ನಡ ಐಚ್ಛಿಕ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಲ್.ಮಲ್ಲೇಶಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು.





ಗ್ರಾಮೀಣ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅವರ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸುವ ಕಾರ್ಯವನ್ನು ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಘಟಕ ಕೈಗೊಂಡಿದೆ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ಸಾಧನೆ ಇತರ ಮಕ್ಕಳಿಗೂ ಮಾರ್ಗದರ್ಶನವಾಗಲಿ ಹಾಗೂ ಮುಂದಿನ ಜೀವನದಲ್ಲಿ ಇನ್ನಷ್ಟು ಸಾಧನೆ ಮಾಡಲು ದಾರಿದೀಪವಾಗಲಿ ಎಂಬುದು ನಮ್ಮ ಆಶಯ ಎಂದು ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಘಟಕದ ಅಧ್ಯಕ್ಷ ಹೆಚ್.ಪಿ.ರವಿಕುಮಾರ್ ತಿಳಿಸಿದ್ದಾರೆ.

# ಕಾಂಗ್ರೆಸ್ ಬಲಪಡಿಸಲು ಕೆ.ಎಂ.ಶಿ.ಗೆ ಸಚಿವ ಸ್ಥಾನ ನೀಡಿ

## ರಾಹುಲ್‌ಗಾಂಧಿಗೆ ಸಂಸದ ಶ್ರೇಯಸ್ ಪಟೇಲ್ ಪತ್ರ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡುವಂತೆ ಒತ್ತಾಯಿಸಿ ಸಂಸದ ಶ್ರೇಯಸ್ ಪಟೇಲ್ ಅವರು ಎಐಸಿಸಿ ನಾಯಕ ಹಾಗು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಅರಸೀಕೆರೆ ಕ್ಷೇತ್ರದ ಹಿರಿಯ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ರಾಜಕೀಯ ಹಿರಿತನ, ಸಂಘಟನಾ ಸಾಮರ್ಥ್ಯ ಹಾಗು ಪಕ್ಷದ ಮೇಲಿನ ನಿಷ್ಠೆಯನ್ನು ಪರಿಗಣಿಸಿ ಸಚಿವ ಸ್ಥಾನ ನೀಡಬೇಕೆಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

ಶಾಸಕರಾಗಿರುವ ಕೆ.ಎಂ.



ಶಿವಲಿಂಗೇಗೌಡ ಅವರು, ಜಿಲ್ಲೆಯ ಪ್ರತಿಕೂಲ ರಾಜಕೀಯ ಪರಿಸ್ಥಿತಿಗಳ ನಡುವೆಯೂ ತಳಮಟ್ಟದಲ್ಲಿ ಪಕ್ಷವನ್ನು ಸಂಘಟಿಸಿ ಕಾರ್ಯಕರ್ತರು ಮತ್ತು ಸಾರ್ವಜನಿಕರ ಬೆಂಬಲವನ್ನು ಕ್ರೋಢೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ತಮ್ಮ ಕಠಿಣ ಪರಿಶ್ರಮದ ಮೂಲಕ ಹಾಸನ ಲೋಕಸಭಾ ಕ್ಷೇತ್ರವನ್ನು ಕಾಂಗ್ರೆಸ್ ಮಡಿಲಿಗೆ ತರುವಲ್ಲಿ ಅವರು ಯಶಸ್ವಿಯಾಗಿದ್ದು, ಲೋಕಸಭಾ ಚುನಾವಣೆಯ ಗೆಲುವಿನ ಹಿಂದೆ ಅವರ ಶ್ರಮ ಪ್ರಮುಖ ಕಾರಣವಾಗಿದೆ. ಶಿವಲಿಂಗೇಗೌಡ ಅವರು ಸತತವಾಗಿ ಅರಸೀಕೆರೆ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದು, ಪ್ರಸ್ತುತ ನಾಲ್ಕನೇ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇದು ಅವರ ಮೇಲಿನ ಜನರ ನಂಬಿಕೆಯನ್ನು ತೋರಿಸುತ್ತದೆಂದು ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ತಮ್ಮ ವಾಕ್ ಚಾತುರ್ಯದಿಂದಲೇ ಹೆಸರಾಗಿರುವ ಅವರು, ಬಿಜೆಪಿ ಹಾಗು ಜೆಡಿಎಸ್ ಸಿದ್ಧಾಂತಗಳನ್ನು ಸದಾ ಪ್ರಬಲವಾಗಿ ವಿರೋಧಿಸುತ್ತಾ ಕಾಂಗ್ರೆಸ್ ಪಕ್ಷದ ತತ್ವ ಮತ್ತು ನೀತಿಗಳನ್ನು ಸದನದಲ್ಲಿ ಗಟ್ಟಿಯಾಗಿ ಪ್ರತಿಪಾದಿಸುತ್ತಿದ್ದಾರೆ. ಜಿಲ್ಲೆಯ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿರುವ ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ಸಿಗಲಿದೆ. ಜೊತೆಗೆ ಕಾಂಗ್ರೆಸ್ ಪಕ್ಷವೂ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲೆಯಲ್ಲಿ ಜೆಡಿಎಸ್ ಹಾಗು ಬಿಜೆಪಿಗೆ ಬಲವಾದ ಟಕ್ಕರ್ ನೀಡಲು ಶಿವಲಿಂಗೇಗೌಡ ಅವರಂತಹ ಹಿರಿಯ ನಾಯಕರಿಗೆ ಸಚಿವ ಸ್ಥಾನ ನೀಡುವುದು ಅಗತ್ಯ. ಈ ಸಂಬಂಧ ಕಾಂಗ್ರೆಸ್ ಹೈಕಮಾಂಡ್ ಹಾಗು ಸಿದ್ದರಾಮಯ್ಯ ಅವರು ಮನವಿಗೆ ಸ್ಪಂದಿಸಬೇಕೆಂದು ಒತ್ತಾಯಿಸಿದ್ದಾರೆ.

## ಕಾಮೆಡ್-ಕೆ ಫಲಿತಾಂಶ ಪ್ರಕಟ

### ಜಾರ್ಖಂಡ್‌ನ ದರ್ಶಿಲ್ ಮೋದಿಗೆ ಮೊದಲ ಸ್ಥಾನ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದ ವೈದ್ಯಕೀಯ, ಇಂಜಿನೀಯರಿಂಗ್ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) 2026-27ನೇ ಶೈಕ್ಷಣಿಕ ವರ್ಷದ ಇಂಜಿನೀಯರಿಂಗ್ ಕೋರ್ಸ್‌ಗಳಿಗೆ ಮೇ 9ರಂದು ನಡೆಸಿದ್ದ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಮೊದಲ 100 ಶ್ರೇಯಾಂಕಗಳ ಪಟ್ಟಿಯಲ್ಲಿ ಕರ್ನಾಟಕದ 30 ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ.

10 ಶ್ರೇಯಾಂಕಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ಸ್ಥಾನ ಪಡೆದಿಲ್ಲ. 90ರಿಂದ 100 ಪರ್ಸೆಂಟೈಲ್ ನಡುವೆ 11,207 ಅಭ್ಯರ್ಥಿಗಳು, 80ರಿಂದ 90 ಪರ್ಸೆಂಟೈಲ್ ನಡುವೆ 11,385 ಅಭ್ಯರ್ಥಿಗಳು ಮತ್ತು 70 ರಿಂದ 80 ಪರ್ಸೆಂಟೈಲ್ ನಡುವೆ 10,940 ಅಭ್ಯರ್ಥಿಗಳಿದ್ದಾರೆ.

ಮೊದಲ ಆರು ರ್‍ಯಾಂಕ್‌ಗಳಲ್ಲಿ ಐದರಲ್ಲಿ ಜಾರ್ಖಂಡ್ ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. ಜಾರ್ಖಂಡ್‌ನ ರಾಂಚಿಯ ದರ್ಶಿಲ್ ಮೋದಿ ಮೊದಲ ಸ್ಥಾನ ಪಡೆದಿದ್ದಾರೆ. ದೇಶಾದ್ಯಂತ 171 ನಗರಗಳ 303 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. 1,10,774 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ಕೌನ್ಸೆಲಿಂಗ್ ಪ್ರಕ್ರಿಯೆ ಸಂಪೂರ್ಣವಾಗಿ ಆನ್‌ಲೈನ್‌ನಲ್ಲಿ ನಡೆಯಲಿದೆ. ಅಭ್ಯರ್ಥಿಗಳು ದಾಖಲೆಗಳನ್ನು ತಮ್ಮ ಲಾಗಿನ್ ಮೂಲಕ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿಕೊಳ್ಳಬೇಕು. ಲಭ್ಯವಿರುವ ಸೀಟುಗಳ ಸಂಖ್ಯೆ, ಶುಲ್ಕ, ಕೌನ್ಸಿಲಿಂಗ್ ದಿನಾಂಕಗಳನ್ನು ಪ್ರಕಟಿಸಲಾಗುವುದೆಂದು ಕಾಮೆಡ್-ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಎಸ್.ಕುಮಾರ್ ಹೇಳಿದ್ದಾರೆ.

CMYK CMYK CMYK CMYK

# ತ್ರಿವಳಿ ಸವಾಲಿನ ನಡುವೆಯೂ ಬೆಳೆಯುತ್ತಿದೆ ಭಾರತದ ಆರ್ಥಿಕತೆ!

ಮನಿಮೈಂಡೆಡ್

ನಮ್ಮ ದೇಶದಲ್ಲಿ ವಾಕ್ ಸ್ವಾತಂತ್ರ್ಯ, ಸ್ವತಂತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅನುಕೂಲ ಎಷ್ಟು ಚೆನ್ನಾಗಿದೆ ಎಂದರೆ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪತಿ ಡಾ. ಪರಕಾಲ ಪ್ರಭಾಕರ್ ಅವರೇ ದೇಶದ ಆರ್ದಥಿಕ ನೀತಿಗಳ ಬಗ್ಗೆ ಹಲವಾರು ಬಾರಿ ಬಹಿರಂಗವಾಗಿ ತೀವ್ರವಾಗಿ ಟೀಕಿಸಿದ್ದಾರೆ. ನಾರ್ವೆಯ ಪತ್ರಕರ್ತೆಗೆ ಇದೆಲ್ಲ ತಿಳಿದಿದೆಯೋ, ಇಲ್ಲವೋ. ಭಾರತದಲ್ಲಿ ಪತ್ನಿ ದೇಶದ ಹಣಕಾಸು ಮಂತ್ರಿಯಾಗಿದ್ದರೂ, ಖುದ್ದು ಪತಿಯೇ ಸರಕಾರದ ಆರ್ಥಿಕ ನೀತಿಗಳನ್ನು ಪ್ರತಿಪಕ್ಷಗಳನ್ನೂ ಮೀರಿಸುವ ರೀತಿಯಲ್ಲಿ ಟೀಕಿಸುತ್ತಾರೆ.

ಅಮಿತ್ ಶಾ ಆಗಲಿ, ಮೋದಿಯವರಾಗಲಿ ಈ ಬಗ್ಗೆ ಯಾವತ್ತೂ ಚಕಾರವೆತ್ತಿಲ್ಲ. ಗಂಡ ಮತ್ತು ಹೆಂಡತಿ ಒಂದೇ ರೀತಿಯ ರಾಜಕೀಯ ಅಥವಾ ಆರ್ಥಿಕ ಅಭಿಪ್ರಾಯ ಹೊಂದಿರಬೇಕು ಎಂಬ ನಿಯಮವಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ ಎಂದು ಈ ಭಿನ್ನಾಭಿಪ್ರಾಯಗಳನ್ನು ಗೌರವಿಸಿದ್ದಾರೆ. ಆದರೆ ಟೀಕೆಗಳು ರಚನಾತ್ಮಕವಾಗಿರಬೇಕು. ವಸ್ತುನಿಷ್ಠವಾಗಿರಬೇಕು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇತ್ತೀಚೆಗೆ ಭಾರತದ ಆರ್ಥಿಕ ಬೆಳವಣಿಗೆಗೆ ಎದುರಾಗಿರುವ ಸವಾಲುಗಳು ಮತ್ತು ಇಕಾನಮಿಯ ಬಲಾಬಲಗಳ ಬಗ್ಗೆ ಮಾತನಾಡಿದ್ದಾರೆ. ಜತೆಗೆ ಆರ್ಥಿಕತೆ ಕುಸಿಯುತ್ತಿದೆ, ಎಲ್ಲವೂ ಕೈಮೀರಿ ಹೋಗುತ್ತಿದೆ ಎಂದು ಬಿಂಬಿಸುತ್ತಿರುವ ನಕಾರಾತ್ಮಕ ವಾದಿಗಳಿಗೆ, ನಿರಾಶಾದಾಯಕ ಮತ್ತು ಭೀತಿ ಹುಟ್ಟಿಸುವ ಅಂತೆ-ಕಂತೆಗಳು ಅಗತ್ಯವಿಲ್ಲ ಎಂದು ಖಡಕ್ ಆಗಿಯೇ ಹೇಳಿದ್ದಾರೆ.

ಭಾರತದ ಆರ್ಥಿಕತೆಯು ಇಂದಿಗೂ ಸಕಾರಾತ್ಮಕ ಮತ್ತು ಚೇತೋಹಾರಿಯಾಗಿದೆ. ದೇಶದ ಸಾಮಾನ್ಯ ಜನರು ಮತ್ತು ಉದ್ಯಮಿಗಳು ಮಾಡುತ್ತಿರುವ ಸಾಧನೆಗಳನ್ನು ಮರೆತು, ಕೇವಲ ಭಯದ ವಾತಾವರಣ ಸೃಷ್ಟಿಸುವುದು ಸರಿಯಲ್ಲ. ಭಾರತಕ್ಕೆ ಈಗ ಇಂತಹ ನಕಾರಾತ್ಮಕ ನರೇಟಿವ್‌ಗಳ ಅಗತ್ಯವಿಲ್ಲ, ಬದಲಿಗೆ ಜನರಲ್ಲಿ ಆತ್ಮವಿಶ್ವಾಸ ತುಂಬುವ ಮಾತು ಮತ್ತು ಕೆಲಸಗಳ ಅಗತ್ಯವಿದೆ ಎಂದಿದ್ದಾರೆ.

ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್ಮೆಂಟ್ ಬ್ಯಾಂಕ್ ಆಫ್ ಇಂಡಿಯಾದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ದೇಶದ ಆರ್ಥಿಕ ಪರಿಸ್ಥಿತಿಯ ವಾಸ್ತವವನ್ನು ವಿವರಿಸಿದ್ದಾರೆ. ಈಗ ಎದುರಾಗಿರುವ ಆರ್ಥಿಕ ಸವಾಲುಗಳು ಭಾರತ ಸ್ವತಃ ಸೃಷ್ಟಿಸಿಕೊಂಡಿದ್ದಲ್ಲ. ಬದಲಿಗೆ ಇವು ಸಂಪೂರ್ಣವಾಗಿ ಬಾಹ್ಯ ಸವಾಲುಗಳಾಗಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟು, ರೆಡ್ಸೀ ಮತ್ತು ಹಾರ್ಮುಜ್ ಜಲಸಂಧಿಯ ಭಾಗದಲ್ಲಿ ಉಂಟಾಗಿರುವ ತೊಂದರೆಗಳು ಜಾಗತಿಕ ಸಪ್ಲೆ ಚೈನ್ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ. ಇದರಿಂದಾಗಿ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ, ರಸಗೊಬ್ಬರ, ಮತ್ತು ಚಿನ್ನದ ಬೆಲೆಗಳು ಗಗನಕ್ಕೇರಿವೆ.

ಸದ್ಯದ ಜಾಗತಿಕ ಪರಿಸ್ಥಿತಿಯಲ್ಲಿ ಭಾರತವು ಪ್ರಮುಖವಾಗಿ ಮೂರು ಸವಾಲುಗಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ. ಅವುಗಳೆಂದರೆ- ಇಂಧನ, ರಸಗೊಬ್ಬರ ಮತ್ತು ವಿದೇಶಿ ವಿನಿಮಯ ಸಂಗ್ರಹ (ಫಾರೆಕ್ಸ್). ಈ ಮೂರಕ್ಕೂ ನಾವು ವಿದೇಶಿ ವಿನಿಮಯದ, ಮುಖ್ಯವಾಗಿ ಡಾಲರ್‌ಗಳಲ್ಲಿ ಹಣ ಪಾವತಿ ಮಾಡಬೇಕಿರುವುದರಿಂದ ಜಾಗತಿಕ ಮಟ್ಟದ ಬಿಕ್ಕಟ್ಟುಗಳು ನಮ್ಮ ಮೇಲೂ ಪ್ರಭಾವ ಬೀರುತ್ತಿವೆ. ಆದರೆ ಇದನ್ನು ಎದುರಿಸಿಯೂ ಭಾರತದ ಆರ್ಥಿಕತೆ ಸದೃಢವಾಗಿದೆ.

ಜನತೆಗೆ ಇಂಧನ ಬೆಲೆ ಏರಿಕೆಯಾಗದಂತೆ ತಡೆಯಲು ಸರ್ಕಾರ ಈಗಾಗಲೇ ಸಾಕಷ್ಟು ಶ್ರಮಿಸಿದೆ. ಅಬಕಾರಿ ಸುಂಕವನ್ನ ಕಡಿತಗೊಳಿಸುವ ಮೂಲಕ ವಾರ್ಷಿಕವಾಗಿ ಸುಮಾರು 1 ಲಕ್ಷ ಕೋಟಿ ರೂಪಾಯಿ ಆದಾಯ ನಷ್ಟವನ್ನು ತಾನೇ ಭರಿಸಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈಗ ಆಗುತ್ತಿರುವ ಬೆಲೆ ಏರಿಕೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಕಂಪನಿಗಳು ಖರೀದಿಸುವ ದರಕ್ಕೆ ಅನುಗುಣವಾಗಿ ಆಗುತ್ತಿದೆ ಎಂದು ಅವರು ವಿವರಿಸಿದ್ದಾರೆ. ಸುಳ್ಳು ವದಂತಿಗಳಿಗೆ ಅಥವಾ ನಕಾರಾತ್ಮಕ ಚರ್ಚೆಗಳಿಗೆ ಕಿವಿಗೊಡಬೇಡಿ ಎಂದು ಹಣಕಾಸು ಸಚಿವರು ಕರೆ ನೀಡಿದ್ದಾರೆ.

ಆತ್ಮವಿಶ್ವಾಸವನ್ನು ತುಂಬಿಕೊಳ್ಳಲು ಎಂಬತ್ತರ ದಶಕದಿಂದ ಇಲ್ಲಿಯವರೆಗಿನ ಆರ್ಥಿಕ ಬೆಳವಣಿಗೆಯ ಅಂಕಿ ಅಂಶಗಳೇ ಸಾಕು, ಗಮನಿಸಿ. 1980-81ರಿಂದ 1989-90ರ ತನಕ ವಾರ್ಷಿಕ ಸರಾಸರಿ 5.7 ಪರ್ಸೆಂಟ್ ಜಿಡಿಪಿ ಬೆಳವಣಿಗೆ ಆಗಿತ್ತು. 1990-91ರಿಂದ 1999-2000 ತನಕ 5.8 ಪರ್ಸೆಂಟ್, 2000-01ರಿಂದ 2009-10 ತನಕ 6.3 ಪರ್ಸೆಂಟ್, 2010-11ರಿಂದ 2019-20 ತನಕ 6.6 ಪರ್ಸೆಂಟ್, 2022-23ರಿಂದ 2025-26 ತನಕ 7.7 ಪರ್ಸೆಂಟ್ ಜಿಡಿಪಿ ಬೆಳವಣಿಗೆ ದಾಖಲಾಗಿದೆ!

ತಲಾ ಆದಾಯವೂ ಇದೇ ಅವಧಿಯಲ್ಲಿ 3.5 ಪರ್ಸೆಂಟ್‌ನಿಂದ 6.7 ಪರ್ಸೆಂಟ್‌ಗೆ ಏರಿಕೆಯಾಗಿದೆ.




ಸವಾಲುಗಳ ಎದುರು ಕುಗ್ಗದೆಯೇ ಭಾರತದ ಆರ್ಥಿಕತೆ ಬೆಳವಣಿಗೆಯಾಗುತ್ತಿದೆ. ಪ್ರಪಂಚದಲ್ಲಿಯೇ ಇವತ್ತು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಭಾರತ ಹೊರಹೊಮ್ಮಿದೆ.

ಇದನ್ನು ಹೆಮ್ಮೆಯಿಂದ, ಅಭಿಮಾನದಿಂದ ಹೇಳಬಹುದು. ಆದರೂ ಅತಿಯಾದ ನಿರಾಶೆಯ ನೆಗೆಟಿವ್ ನರೇಟಿವ್ಬಿ ತ್ತುವವರನ್ನು ಏನೆಂದು ಕರೆಯಬೇಕು? ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಭಾರತ ಸೇರಿದಂತೆ ಏಷ್ಯಾ, ಯುರೋಪ್ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅಲ್ಲೋಲ ಕಲ್ಲೋಲವಾಗಿದೆ. ಇಂಧನ ಬಿಕ್ಕಟ್ಟು ತಾರಕಕ್ಕೇರಿದೆ. ಫೆಬ್ರವರಿ ಅಂತ್ಯಕ್ಕೆ ಆರಂಭವಾದ ಇರಾನ್ ಯುದ್ಧ ಇನ್ನೂ ನಿಂತಿಲ್ಲ. ಹೀಗಿದ್ದರೂ 2026ರ ಏಪ್ರಿಲ್‌ನಲ್ಲಿ ಭಾರತದ ಆರ್ಥಿಕತೆ ಸಕ್ರಿಯವಾಗಿತ್ತು.

ಇಂಡಸ್ಟ್ರಿಯಲ್ ಮತ್ತು ಸರ್ವೀಸ್ ಸೆಕ್ಟರ್‌ನಲ್ಲಿ ಚಟುವಟಿಕೆಗಳು ಪ್ರಬಲವಾಗಿತ್ತು. ಆಹಾರದ ಬೆಲೆಗಳ ಏರಿಕೆಯಿಂದಾಗಿ ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರ 3.5 ಪರ್ಸೆಂಟ್‌ಗೆ ಏರಿತ್ತಾದರೂ, ಆರ್‌ಬಿಐ ಮಾನದಂಡದ ಪ್ರಕಾರ ಸುರಕ್ಷಿತ ಮಟ್ಟದಲ್ಲಿಯೇ ಇದೆ. ಮಾರ್ಚ್‌ನಲ್ಲಿ ನಿವ್ವಳ ವಿದೇಶಿ ನೇರ ಬಂಡವಾಳ ಹೂಡಿಕೆ ಪಾಸಿಟಿವ್ ಆಗಿತ್ತು. ದುರದೃಷ್ಟವಶಾತ್ ಜಾಗತಿಕ ಆರ್ಥಿಕ ಪರಿಸ್ಥಿತಿಯು ಇಂದಿಗೂ ಸೂಕ್ಷ್ಮ ಹಾಗೂ ಅಸ್ಥಿರವಾಗಿದೆ. ನಾನಾ ದೇಶಗಳಲ್ಲಿ ಉಂಟಾಗಿರುವ ತಲ್ಲಣಗಳು, ಗಗನಕ್ಕೇರಿರುವ ಇಂಧನ ವೆಚ್ಚಗಳು ಸವಾಲಾಗಿ ಪರಿಣಮಿಸಿದೆ.

ಆರ್ಥಿಕ ಬೆಳವಣಿಗೆ ಹಾಗೂ ಹಣದುಬ್ಬರದ ಭವಿಷ್ಯದ ಬಗೆಗಿನ ಅನಿಶ್ಚಿತತೆಯು ಜಗತ್ತನ್ನು ಆವರಿಸಿಕೊಂಡಿದೆ. ಪಶ್ಚಿಮ ಏಷ್ಯಾದ ಸಂಘರ್ಷಗಳು ಜಾಗತಿಕ ಮಾರುಕಟ್ಟೆ, ವ್ಯಾಪಾರ ಮತ್ತು ಸರಬರಾಜು ಸಪ್ಲೆ ಚೈನ್ ಮೇಲೆ ನಿರಂತರ ಒತ್ತಡ ಹೇರುತ್ತಿವೆ. ಇದು ಹಣಕಾಸು ಮಾರುಕಟ್ಟೆಯಲ್ಲಿ ಏರಿಳಿತಗಳಿಗೆ ಕಾರಣವಾಗಿದೆ. ಆದರೆ, ಇಂತಹ ಕಠಿಣ ಜಾಗತಿಕ ಸನ್ನಿವೇಶದಲ್ಲೂ, ಭಾರತವು ಅತ್ಯಂತ ಸದೃಢವಾದ ಆರ್ಥಿಕ ಬಲದೊಂದಿಗೆ ಬೆಳೆಯುತ್ತಿದೆ.

ದೇಶೀಯ ಬೇಡಿಕೆಯೂ ಸದೃಢವಾಗಿದೆ. ಸೇವಾ ಕ್ಷೇತ್ರ ಚುರುಕಾಗಿದೆ. ದೇಶಕ್ಕೆ 11 ತಿಂಗಳಿನ ಇಡೀ ಆಮದು ವೆಚ್ಚಕ್ಕೆ ಸಾಕಾಗುವಷ್ಟು ವಿದೇಶಿ ವಿನಿಮಯ ಸಂಗ್ರಹ ಇದೆ. 2025-26ರಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಪ್ರಮಾಣವು 2024-25ಕ್ಕಿಂತಲೂ ವೃದ್ಧಿಸಿದೆ.

ಹೀಗಿದ್ದರೂ, ಇಂಧನ ಸಮಸ್ಯೆ ಇದೆಯಲ್ಲವೇ, ಅದರ ಆಯಾಮಗಳು ಹಲವು. ಕಚ್ಚಾ ತೈಲ ಮತ್ತು ಬಂಗಾರದ ಆಮದು ಕುರಿತ ಬಿಲ್ ಹೆಚ್ಚಳವಾಗಿದೆ. ವ್ಯಾಪಾರ ಕೊರತೆ ಕಾಡುತ್ತಿದೆ. ಸ್ಟಾಕ್ ಮಾರುಕಟ್ಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಮಾರುತ್ತಿದ್ದರೂ, ದೇಶೀಯ ಹೂಡಿಕೆದಾರರು ಭರ್ಜರಿ ಹೂಡಿಕೆ ಮಾಡುತ್ತಿದ್ದಾರೆ. ಭಾರತದ ಆರ್ಥಿಕ ಬೆಳವಣಿಗೆಯ ಬಗ್ಗೆ ಈಕ್ವಿಟಿ ಹೂಡಿಕೆದಾರರು ಎಷ್ಟು ಆತ್ಮ ವಿಶ್ವಾಸ ಹೊಂದಿದ್ದಾರೆ ಎಂಬುದನ್ನುಅಂಕಿ ಅಂಶಗಳೇ ಬಿಂಬಿಸುತ್ತವೆ.

ಇದು ಅತ್ಯಂತ ಭರವಸೆದಾಯಕವಾಗಿದೆ. ಭಾರತೀಯ ಮ್ಯೂಚುವಲ್ ಫಂಡ್ ಅಸೋಸಿಯೇಷನ್ ಬಿಡುಗಡೆ ಮಾಡಿರುವ ಇತ್ತೀಚಿನ (2026ರ ಆರಂಭದ) ಅಂಕಿ-ಅಂಶಗಳ ಪ್ರಕಾರ, ಸದ್ಯಕ್ಕೆ ದೇಶದಲ್ಲಿ ಪ್ರತಿ ತಿಂಗಳು ಸಿಪ್ ಮೂಲಕ ಸರಾಸರಿ 25000 ಕೋಟಿ ರೂಪಾಯಿ ಮಾರುಕಟ್ಟೆಗೆ ಹೂಡಿಕೆಯಾಗುತ್ತಿದೆ.

ಸಕ್ರಿಯವಾಗಿರುವ ಒಟ್ಟು ಸಿಪ್ ಖಾತೆಗಳ ಸಂಖ್ಯೆ ಸುಮಾರು 8.5ರಿಂದ 9 ಕೋಟಿಯನ್ನು ದಾಟಿದೆ. ಸರಾಸರಿಯಾಗಿ ಒಬ್ಬ ಹೂಡಿಕೆದಾರ ತಿಂಗಳಿಗೆ 2500 ರುಪಾಯಿಗಳಿಂದ 3000 ರುಪಾಯಿ ತನಕ ಸಿಪ್ ಮೂಲಕ ಹೂಡಿಕೆ ಮಾಡುತ್ತಿದ್ದಾನೆ. ಜಾಗತಿಕ ಏರಿಳಿತಗಳ ನಡುವೆಯೂ ಭಾರತದ ಮಾರುಕಟ್ಟೆ ಸ್ಥಿರವಾಗಿರಲು ಈ ದೇಶೀಯ ಸಿಪ್ ಹೂಡಿಕೆಯೇ ಪ್ರಮುಖ ಕಾರಣವಾಗಿದೆ.

ಭಾರತದಲ್ಲಿ ಸಿಡಿಎಸ್‌ಎಲ್ ಮತ್ತು ಎನ್‌ಎಸ್‌ಡಿಎಲ್ ಸೇರಿ ಒಟ್ಟು ಡಿಮ್ಯಾಟ್ ಖಾತೆಗಳ ಸಂಖ್ಯೆ 16 ಕೋಟಿಯ ಗಡಿ ದಾಟಿದೆ. ಪ್ರತಿ ತಿಂಗಳು ಹೊಸದಾಗಿ 25 ರಿಂದ 30 ಲಕ್ಷ ಹೊಸ ಡಿಮ್ಯಾಟ್ ಖಾತೆಗಳು ಸೇರ್ಪಡೆ ಯಾಗುತ್ತಿವೆ. ಕಾರ್ಪೊರೇಟ್ ವಲಯ, ಉದ್ದಿಮೆಗಳ ಪ್ರಗತಿಯನ್ನು ಇದು ಬಿಂಬಿಸಿದೆ.

ಇದು ಮಾತ್ರವಲ್ಲದೆ, ಚಿಲ್ಲರೆ ಹೂಡಿಕೆದಾರರು ನೇರವಾಗಿ ಷೇರು ಮಾರುಕಟ್ಟೆಯಲ್ಲಿ ಪ್ರತಿ ತಿಂಗಳು ಸರಾಸರಿ 15000 ಕೋಟಿಯಿಂದ 20000 ಕೋಟಿ ರೂಪಾಯಿ ಹೂಡಿಕೆ ಮಾಡುತ್ತಿದ್ದಾರೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಂದಾಜಿಸುತ್ತಾರೆ.

ಕೆಲವರು ಭಾರತದ ಸಾಲ ಅತಿ ಆಯಿತು. ಅಪಾಯದ ಮಟ್ಟದಲ್ಲಿದೆ ಎಂದು ಆರೋಪಿಸುತ್ತಾರೆ. ಆದರೆ ವಾಸ್ತವವಾಗಿ ಭಾರತದ ಸಾಲದ ಮಟ್ಟ ಅಪಾಯಕಾರಿ ಮಟ್ಟದಲ್ಲಿ ಇಲ್ಲವೇ ಇಲ್ಲ. ಆತಂಕ ಪಡಬೇಕಿಲ್ಲ. ಕೇಂದ್ರ ಸರ್ಕಾರದ ಒಟ್ಟು ಸಾಲ ಮತ್ತು ಇತರ ಹೊಣೆಗಾರಿಕೆಗಳು ಸುಮಾರು 197.18 ಲಕ್ಷ ಕೋಟಿ (2025-26ರ ಪರಿಷ್ಕೃತ ಅಂದಾಜು) ದಾಟಿದ್ದು, ಇದು 2026-27ರ ಅಂತ್ಯಕ್ಕೆ ಸುಮಾರು 214.82 ಲಕ್ಷ ಕೋಟಿ ತಲುಪಬಹುದು ಎಂದು ಅಂದಾಜಿಸಲಾಗಿದೆ.

> ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇತ್ತೀಚೆಗೆ ಭಾರತದ ಆರ್ಥಿಕ ಬೆಳವಣಿಗೆಗೆ ಎದುರಾಗಿರುವ ಸವಾಲುಗಳು ಮತ್ತು ಇಕಾನಮಿಯ ಬಲಾಬಲಗಳ ಬಗ್ಗೆ ಮಾತನಾಡಿದ್ದಾರೆ. ಜತೆಗೆ ಆರ್ಥಿಕತೆ ಕುಸಿಯುತ್ತಿದೆ, ಎಲ್ಲವೂ ಕೈಮೀರಿ ಹೋಗುತ್ತಿದೆ ಎಂದು ಬಿಂಬಿಸುತ್ತಿರುವ ನಕಾರಾತ್ಮಕವಾದಿಗಳಿಗೆ, ನಿರಾಶಾದಾಯಕ ಮತ್ತು ಭೀತಿ ಹುಟ್ಟಿಸುವ ಅಂತೆ-ಕಂತೆಗಳು ಅಗತ್ಯವಿಲ್ಲ ಎಂದು ಖಡಕ್ ಆಗಿಯೇ ಹೇಳಿದ್ದಾರೆ.

ಸಾಲ ಮತ್ತು ಜಿಡಿಪಿ ಅನುಪಾತ ಗಮನಿಸಿದರೆ ಆತಂಕಕ್ಕೆ ಕಾರಣವಿಲ್ಲ. ಏಕೆಂದರೆ ಆರ್ಥಿಕತೆಯಲ್ಲಿ ಸಾಲದ ಪ್ರಮಾಣವನ್ನು ಅಳೆಯಲು ಇದನ್ನು ಪ್ರಮುಖವಾಗಿ ಬಳಸಲಾಗುತ್ತದೆ. ಭಾರತದ ಸಾಲ ಮತ್ತು ಜಿಡಿಪಿ ಅನುಪಾತವು ಪ್ರಸ್ತುತ 55.6 ಪರ್ಸೆಂಟ್‌ನಷ್ಟಿದೆ. (2026- 27ರ ಬಜೆಟ್ ಅಂದಾಜು). ಇದು ಕಳೆದ ವರ್ಷ (56.1%)ಕ್ಕಿಂತ ಕಡಿಮೆಯಾಗಿರುವುದು ಸಕಾರಾತ್ಮಕ ಅಂಶವಾಗಿದೆ.

ಸಾರ್ವಜನಿಕ ಬ್ಯಾಂಕ್‌ಗಳ ಒಟ್ಟು ಎನ್‌ಪಿಎ 2018ರ ಸುಮಾರಿಗೆ ಸುಮಾರು 14.6%ರಷ್ಟು ಅತ್ಯಂತ ಕಳವಳಕಾರಿ ಮಟ್ಟಕ್ಕೆ ತಲುಪಿತ್ತು. ಆದರೆ, ಸರಕಾರದ ಮತ್ತು ಆರ್‌ಬಿಐ ನಿಕಟ ಉಸ್ತುವಾರಿಯಿಂದಾಗಿ ಪ್ರಸ್ತುತ ಇದು 2.8 ಪರ್ಸೆಂಟ್ ಆಸುಪಾಸಿಗೆ ಇಳಿಕೆಯಾಗಿದೆ. ಇದು ಕಳೆದ ಒಂದು ದಶಕದ ಅತ್ಯಂತ ಕನಿಷ್ಠ ಮಟ್ಟವಾಗಿದೆ.

ಒಂದೊಮ್ಮೆ ನಷ್ಟದಲ್ಲಿದ್ದ ದೇಶದ ಸಾರ್ವಜನಿಕ ವಲಯದ ಬ್ಯಾಂಕುಗಳು ಈಗ ಸತತವಾಗಿ ಬಂಪರ್ ಲಾಭವನ್ನು ಗಳಿಸುತ್ತಿವೆ. ಬ್ಯಾಂಕುಗಳ ಬಳಿ ವಸೂಲಾಗದ ಸಾಲದ ಹೊರೆ ಕಡಿಮೆಯಾದಾಗ, ಹೊಸದಾಗಿ ಸಾಲ ನೀಡಲು ಅವರ ಬಳಿ ಹೆಚ್ಚಿನ ಹಣ ಲಭ್ಯವಿರುತ್ತದೆ.

ಪ್ರಸ್ತುತ ಬ್ಯಾಂಕುಗಳು ಉದ್ಯಮಿಗಳಿಗೆ, ಸಣ್ಣ ಉದ್ದಿಮೆ ಮತ್ತು ಜನಸಾಮಾನ್ಯರಿಗೆ (ಮನೆ, ವಾಹನ, ಶಿಕ್ಷಣ ಸಾಲ) ಮುಕ್ತವಾಗಿ ಸಾಲ ನೀಡುತ್ತಿವೆ. ಇದು ಮಾರುಕಟ್ಟೆಯಲ್ಲಿ ಹಣದ ಚಲಾವಣೆಯನ್ನು ಹೆಚ್ಚಿಸಿದೆ. ದೇಶದ ಆರ್ಥಿಕತೆ ಗಮನಾರ್ಹವಾಗಿ ಬೆಳೆಯುತ್ತಿದೆ ಎನ್ನಲು ಇನ್ನೂ ಹಲವಾರು ನಿದರ್ಶನಗಳು ಇವೆ. ಇವು ಸ್ಯಾಂಪಲ್ ಅಷ್ಟೇ.

**- ಕೇಶವ** ಪ್ರಸಾದ್ ಬಿ

---

> ಒಂದು ದೊಡ್ಡ ಕೋಣೆ, ಅಲ್ಲಿಯೇ ಒಂದು ಮೂಲೆಯಲ್ಲಿ kitchenette -ಅಡುಗೆ ಬಿಸಿ ಮಾಡಿಕೊಳ್ಳಲು ಒಂದು ಚಿಕ್ಕ ಒಂದು ಇಂಡಕ್ಷನ್ ಒಲೆ, ಅಲ್ಲಿಯೇ ಮೇಲ್ಗಡೆ ಒಂದು ಮೈಕ್ರೋ ವೇವ್, ಕೈ ಅಗಲದ ವಾಶ್ ಬೇಸಿನ್, ಚಿಕ್ಕ ಫ್ರಿಡ್ಜ್. ಎಲ್ಲವೂ ಚಿಕ್ಕದು- ಆದರೆ ಅತ್ಯಾಧುನಿಕ ಸಲಕರಣೆಗಳು. ಆ ಒಂಟಿ ಕೋಲಿಯ ಸ್ಟುಡಿಯೋ ಅಪಾರ್ಟ್ಮೆಂಟ್‌ನ ಒಳಗಿದ್ದದ್ದು ಒಂದೇ ಬಾಗಿಲು- ಅದನ್ನು ತೆರೆದರೆ ಕೈ ಅಗಲಿಸಲಿಕ್ಕಾಗದ ಅಗಲದ ಬಚ್ಚಲುಮನೆ.

# ಅಡುಗೆ ಮನೆ ಇನ್ನೊಂದ್ ಚೂರು ದೊಡ್ಡದಿದ್ದಿದ್ದರೆ..!






ಶಿಶಿರಕಾಲ

ಅಡುಗೆ ಮನೆ ಇನ್ನೊಂದ್ ಚೂರು ದೊಡ್ಡದಿದ್ದಿದ್ದರೆ..! ಎಲ್ಲಾ ಗೃಹಿಣಿಯರ ಏಕೈಕ, ಸಾಮಾನ್ಯ ಕಂಪ್ಲೆಂಟ್ ಇದು.

ಆ ದಿನ ಬಾಡಿಗೆ ಮನೆ ತೋರಿಸುವ ಏಜೆಂಟ್ ನಮ್ಮನ್ನು ಈ ಜಾಗಕ್ಕೆ ಬನ್ನಿ ಎಂದು ಅಡ್ರೆಸ್ ಕೊಟ್ಟಿದ್ದ. ಅವನು ಕೊಟ್ಟ ಅಡ್ರೆಸ್ ನ್ಯೂಯಾರ್ಕ್‌ನ ಮ್ಯಾನ್ ಹಟ್ಟನ್‌ನ ನನ್ನ ಆಫೀಸಿನಿಂದ ಎರಡೇ ಮೈಲಿ ದೂರದಲ್ಲಿತ್ತು. ನಾನು ಮತ್ತು ನನ್ನ ಹೆಂಡತಿ ಹೇಳಿದ ಸಮಯಕ್ಕೆ ಟ್ಯಾಕ್ಸಿ ಹಿಡಿದು ಅಲ್ಲಿಗೆ ತಲುಪಿದೆವು. ಇಳಿದು ನೋಡಿದರೆ ತುದಿ ಕಾಣದಷ್ಟು ಎತ್ತರದ ಬಿಲ್ಡಿಂಗ್.

ಏಜೆಂಟ್ ನಮ್ಮನ್ನು ಉದ್ದದ ಕಾರಿಡಾರು ದಾಟಿ ಬಿಲ್ಡಿಂಗಿನ ಅಂತರ್ಯದೊಳಕ್ಕೆ ಕರೆದುಕೊಂಡು ಹೋದ. ಅಲ್ಲಿದ್ದ ಲಿಫ್ಟಿನೊಳಗೆ ಹೊಕ್ಕಿ ನೋಡಿದಾಗಲೇ ಆ ಕಟ್ಟಡದಲ್ಲಿ ಎಂಬತ್ತು ಮಹಡಿಗಳಿವೆ ಎಂದು ನಮಗೆ ಗೊತ್ತಾಗಿದ್ದು. ನಲವತ್ತೆರಡನೇ ಮಹಡಿಯಲ್ಲಿ ಲಿಫ್ಟ್ ಬಾಗಿಲು ತೆರೆದುಕೊಂಡಿತು.

ಅಲ್ಲಿ ಇಪ್ಪತ್ತೈದು ಒಂದೇ ಬಣ್ಣದ, ಕಟ್ಟಿನ ಬಾಗಿಲುಗಳು, ಒಂದರ ಪಕ್ಕ ಇನ್ನೊಂದು. ಮನೆಗಳನ್ನು ಪ್ರತ್ಯೇಕಿಸುತ್ತಿದ್ದುದು ಆ ಬಾಗಿಲುಗಳ ಮೇಲಿದ್ದ ಸಂಖ್ಯೆಗಳು. ಏಜೆಂಟ್ ಈ ಕಟ್ಟಡವಿರುವ ಜಾಗ ಈ ಕಾರಣಕ್ಕೆ ಬಹಳ ವಿಶೇಷ, ಇಲ್ಲಿ ಇಂತಿಂತಹ ಸೌಲಭ್ಯ ಇದೆ ಎಂದು ಹೇಳುತ್ತಿದ್ದರೂ ನಮ್ಮಿಬ್ಬರಿಗೂ ಮನೆ ಹೇಗಿರಬಹುದೆಂಬ ಬಗ್ಗೆಯೇ ಯೋಚನೆ.

ಬಾಗಿಲು ತೆರೆದು ಒಳಕ್ಕೆ ಹೋಗುತ್ತಿದ್ದಂತೆ, ಅದು ನಾವಂದುಕೊಂಡ ರೀತಿಯ ಮನೆಯಾಗಿರಲಿಲ್ಲ. ಇಪ್ಪತ್ತು- ಇಪ್ಪತ್ತು ವಿಸ್ತೀರ್ಣದ ಒಂದು ದೊಡ್ಡ ಕೋಲಿ. ಒಳಹೊಕ್ಕು ಚಪ್ಪಲಿ ತೆಗೆಯಲು ಮುಂದಾದರೆ ಬೇಡವೆಂದು ಏಜೆಂಟ್ ಸನ್ನೆ ಮಾಡಿದ. ಸರಿ ಎಂದು ಒಳಗೆ ಹತ್ತು ಹೆಜ್ಜೆ ಇಟ್ಟಿಲ್ಲ - ಮನೆಯೇ ಮುಗಿದುಹೋಯಿತು.

ಒಂದು ದೊಡ್ಡ ಕೋಣೆ, ಅಲ್ಲಿಯೇ ಒಂದು ಮೂಲೆಯಲ್ಲಿ kitchenette -ಅಡುಗೆ ಬಿಸಿ ಮಾಡಿಕೊಳ್ಳಲು ಒಂದು ಚಿಕ್ಕ ಒಂದು ಇಂಡಕ್ಷನ್ ಒಲೆ, ಅಲ್ಲಿಯೇ ಮೇಲ್ಗಡೆ ಒಂದು ಮೈಕ್ರೋ ವೇವ್, ಕೈ ಅಗಲದ ವಾಶ್ ಬೇಸಿನ್, ಚಿಕ್ಕ ಫ್ರಿಡ್ಜ್. ಎಲ್ಲವೂ ಚಿಕ್ಕದು- ಆದರೆ ಅತ್ಯಾಧುನಿಕ ಸಲಕರಣೆಗಳು. ಆ ಒಂಟಿ ಕೋಲಿಯ ಸ್ಟುಡಿಯೋ ಅಪಾರ್ಟ್ಮೆಂಟ್‌ನ ಒಳಗಿದ್ದದ್ದು ಒಂದೇ ಬಾಗಿಲು- ಅದನ್ನು ತೆರೆದರೆ ಕೈ ಅಗಲಿಸಲಿಕ್ಕಾಗದ ಅಗಲದ ಬಚ್ಚಲುಮನೆ. ಅಷ್ಟೆ. ಏಜೆಂಟ್ ಪ್ರಕಾರ ಇದನ್ನು ಮನೆ, ರೂಮು, ಅಪಾರ್ಟ್ಮೆಂಟು, ಹೋಮು, ವಿಲ್ಲಾ ಏನೆಂದು ಕರೆದರೂ ಈ ಕೋಣೆ ಅದಾಗಬಹುದಿತ್ತು.

ಇದು ನ್ಯೂಯಾರ್ಕ್ ನಗರದ ಐಷಾರಾಮಿ ವ್ಯವಸ್ಥೆ, ಇದು ನಮಗೆ ಸಿಗುತ್ತಿರುವುದೇ ಜನ್ಮಜನ್ಮಾಂತರದ ಪುಣ್ಯದ ಫಲ ಎಂದು ಏಜೆಂಟ್ ಎಲ್ಲವನ್ನೂ ವಿವರಿಸುತ್ತಿದ್ದ. ಅಷ್ಟೇ ಅಗಲದ ಕೋಣೆಗೆ ಅವನು ಹೇಳಿದ ಬಾಡಿಗೆ ಕೇಳಿ ಹೊಟ್ಟೆ ತೊಳೆಸಿ ಹೋಯಿತು. ತಿಂಗಳಿಗೆ ಎರಡೂವರೆ ಸಾವಿರ ಡಾಲರ್!


ನಾವಿಬ್ಬರು ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ನಾಲ್ಕು ತಿಂಗಳ ಬಾಡಿಗೆಯಲ್ಲಿ ಊರಿನಲ್ಲಿ ಒಂದು ಚಿಕ್ಕ ಅರಮನೆಯನ್ನೇ ಕಟ್ಟಿಬಿಡಬಹುದು! ಆದರೆ ಅಲ್ಲಿಯೇ ಬಾಡಿಗೆಗೆ ಒಪ್ಪುವ ಅನಿವಾರ್ಯತೆ ಮೌನದಲ್ಲಿಯೇ ಇಬ್ಬರಿಗೂ ಅರ್ಥವಾಗಿತ್ತು. ಸದ್ಯ ಇಲ್ಲಿಯೇ ಇರೋಣ, ಚಳಿಗಾಲ ಮುಗಿದ ಮೇಲೆ ಬೇರೆ ವ್ಯವಸ್ಥೆ ಮಾಡಿಕೊಂಡರಾಯ್ತು ಎಂದು ಆರು ತಿಂಗಳಿಗೆ ಲೀಸ್ ಸಹಿ ಮಾಡಿದೆವು.



ಸ್ಟುಡಿಯೋ ಅಪಾರ್ಟ್ಮೆಂಟ್‌ನಿಂದ ಕೆಳಕ್ಕಿಳಿದು ಹೊರ ಬಂದರೆ ಮನುಷ್ಯನ ಮಹತ್ವಾಕಾಂಕ್ಷೆಯನ್ನೇ ಒಂದರ ಮೇಲೆ ಇನ್ನೊಂದು ಇಟ್ಟಂತೆ ಕಟ್ಟಿದ ಕಟ್ಟಡಗಳು. ಅದರ ಅಸಂಖ್ಯ ಗಾಜಿನ ಒಂದೊಂದು ಕಿಟಕಿಯೊಳಗೆ ಒಂದೊಂದು ಕುಟುಂಬಗಳು. ನ್ಯೂಯಾರ್ಕ್‌ನ ಬೀದಿಯಲ್ಲಿ ಎರಡು ನಿಮಿಷ ನಿಂತರೆ ಜಗತ್ತಿನ ಎಲ್ಲಾ ದೇಶಗಳವರೂ ನಮ್ಮನ್ನು ಹಾದು ಹೋಗಿರುತ್ತಾರಂತೆ!

ಬಾರು, ಪಬ್ಬು, ಆಫೀಸ್ ಕಟ್ಟಡಗಳು, ಕಾಫಿ ಶಾಪ್, ಪಾರ್ಕುಗಳು- ಆಧುನಿಕತೆ ಮೈತಳೆದ ಊರು ನ್ಯೂಯಾರ್ಕ್. ಆದರೆ ಮನೆಯೆಂಬುದರೊಳಗೆ ಬಂದರೆ ನಾಲ್ಕು ಗೋಡೆ, ಮತ್ತು ತಾನೇ ಅಡುಗೆ ಮನೆ ಎನ್ನುವ ಕೋಣೆಯ ಒಂದು ಮೂಲೆ!


ನಾನು ಮತ್ತು ನನ್ನ ಹೆಂಡತಿ ಒಂದೇ ಊರು ಮತ್ತು ಹಿನ್ನೆಲೆಯವರು. ಹಳ್ಳಿಯಲ್ಲಿ ಬೆಳೆದವರು. ಊರಲ್ಲಿ ಅಮ್ಮನ, ಅತ್ತೆಯ ಅಡುಗೆ ಮನೆ ನಮ್ಮಿಡೀ ಮ್ಯಾನ್ ಹಟ್ಟನ್ ಅಪಾರ್ಟ್ಮೆಂಟಿನ ಮನೆಗಿಂತ ದೊಡ್ಡದಿತ್ತು. ಆದರೆ ಇಲ್ಲಿ ವಿಸ್ತೀರ್ಣ ಮಾತ್ರ ಕೊರತೆಯಾಗಿರಲಿಲ್ಲ. ಅದರಾಚೆ ನಮಗಿಬ್ಬರಿಗೂ ಇದ್ದ ಅಡುಗೆ ಮನೆಯೆಂಬ ಕಲ್ಪನೆಗೂ ಈ ಕೋಣೆಯ ಮೂಲೆಯಲ್ಲಿ ಇದ್ದ ಅಡುಗೆ ಮನೆಗೂ ಅಜ-ಗಜಾಂತರವಿತ್ತು. ಅಡುಗೆಮನೆಯೇ ಇಲ್ಲದ ಮನೆಯನ್ನು ಮನೆಯೆಂದು ಹೇಗೆ ಕರೆಯೋದು? ಊರಿನ ಮನೆಯಲ್ಲಿ ಅಡುಗೆಮನೆ ಎನ್ನುವುದು ಕೇವಲ ಅಡುಗೆ ಮಾಡುವ ಒಂದು ಕೋಣೆ ಮಾತ್ರ ಆಗಿರಲಿಲ್ಲ, ದಿನಕ್ಕೆ ಮೂರು ಬಾರಿ ಮನೆಯವರೆಲ್ಲ ಸೇರುವ ಜಾಗವಾಗಿತ್ತು. ಈಗ ಯೋಚಿಸಿದರೆ ಹೆಚ್ಚು ಕಡಿಮೆ ಬದುಕು ಸಂಭವಸಿದ್ದೇ ಅಡುಗೆ ಮನೆಯಲ್ಲಿ.



ಬದುಕಿನ ಅಷ್ಟೂ ಪ್ರೀತಿ, ವಾದ, ಕೋಪ, ಸಂಧಾನ, ಮಾತುಕತೆ ಎಲ್ಲವೂ ನಡೆದದ್ದು ಅಡುಗೆಮನೆಯಲ್ಲಿಯೇ. ಅಮ್ಮ ಸದಾ ಅಲ್ಲಿ ಇದ್ದೇ ಇರುತ್ತಿದ್ದರು. ಸುಮ್ಮನೆ ನೀರು ಕುಡಿಯಲು ಹೋದರೂ ಅಮ್ಮ, ಅಜ್ಜಿಯ ಜೊತೆ ಅಂದಿಷ್ಟು ಮಾತುಕತೆ ನಡೆಯುತ್ತಿತ್ತು. ನಡುವೆ ಅಜ್ಜ ಅಡುಗೆಮನೆಗೆ ಬಂದರೆ ಆ ಮಾತುಕತೆ ಅಲ್ಲಿಯೇ ಆಕಾರಣ ನಿಂತುಬಿಡುತ್ತಿತ್ತು! ವಿಷಯಾಂತರವಾಗುತ್ತಿತ್ತು.

ಅಮ್ಮ ಮತ್ತು ಅತ್ತೆ ಇಬ್ಬರಿಗೂ ಗ್ಯಾಸ್ ಸಿಲೆಂಡರ್‌ನಲ್ಲಿ ಅಡುಗೆ ಮಾಡಲು ಅದೇಕೋ ಮನಸ್ಸು ಒಪ್ಪುತ್ತಿರಲಿಲ್ಲ. ಹಾಗಾಗಿ ಅಡುಗೆಮನೆಯ ಆಚೆ ಹಿತ್ತಲಲ್ಲಿ ಎರಡು ಮಣ್ಣಿನ ಒಲೆ ಮಾಡಿಕೊಂಡಿದ್ದರು. ಹೆಚ್ಚಿನ ಶಾಖ ಬೇಡುವ ಕೊಚ್ಚಲಕ್ಕಿ ಇತ್ಯಾದಿ ಅಲ್ಲಿಯೇ ಬೆಂದು ಮೆತ್ತಗಾಗಬೇಕು. ಒಂದಿಷ್ಟು ಪಾತ್ರೆಗಳು, ಹಾಲು ತಂದು ತೊಳೆದಿಟ್ಟ ಸೆವೆನ್ ಅಪ್ ಬಾಟಲಿ, ಗ್ರೈಂಡರ್, ಮಿಕ್ಸರ್ ಸದ್ದು, ಒಗ್ಗರಣೆಯ ಘಮ, ಗಾಳಿ ಬೀಸಿದಾಗ ಒಳ ಸೇರುವ ಹಿತ್ತಲ ಒಲೆಯ ಕಟ್ಟಿಗೆಯ ಹೊಗೆ.

ಹಬ್ಬಗಳು, ತಿಥಿ ಇತ್ಯಾದಿ ಬಂದರಂತೂ ಮನೆಯವರ ಧ್ವನಿ ಮೀರಿಸುವಷ್ಟು ಅಡುಗೆಮನೆಯದೇ ಸದ್ದು. ಸಾಮಾನ್ಯ ದಿನಗಳಲ್ಲಿ ಸಂಬಂಧಿಕರು, ಸ್ನೇಹಿತರು, ಪರಿಚಯದವರು, ಪರಿಚಯವಿಲ್ಲದವರು ಹೀಗೆ ಯಾರು ಯಾರೋ ಮನೆಗೆ ಬರುತ್ತಿದ್ದರು. ಬಂದವರಿಗೆಲ್ಲ ಅಮ್ಮ, ಅಜ್ಜಿ ಚಹಾ ತಿಂಡಿ ಮಾಡಿಕೊಡುತ್ತಿದ್ದರು. ಸುಡುಬಿಸಿಲಲ್ಲಿ ಬಂದವರಿಗೆ ತಣ್ಣನೆಯ ಮಜ್ಜಿಗೆ. ಅನುಮಾನವೇ ಬೇಡ- ಬದುಕು ಸಂಭವವಿಸುತ್ತಿದ್ದುದೇ ಅಡುಗೆಮನೆಯಲ್ಲಿ.



ನಮ್ಮ ಮನೆ ಎಂದಲ್ಲ, ಎಲ್ಲರ ಮನೆಯ ಬದುಕು ಆವಿರ್ಭವಿಸುವುದು ಅಲ್ಲಿಯೇ. ನಮ್ಮೂರ ಅಡುಗೆಮನೆಯಲ್ಲಿ ಯಾವತ್ತೂ ಏಕಾಂತವಿರಲಿಲ್ಲ. ಆದರೆ ಜಗತ್ತಿನ ಅತ್ಯಾಧುನಿಕ ಕಟ್ಟಡದ ಅತ್ಯಾಧುನಿಕ ಅಡುಗೆಮನೆಯಲ್ಲಿ ಒಂದೂವರೆ ಜನರಿಗಿಂತ ಹೆಚ್ಚಿಗೆ ನಿಲ್ಲಲಿಕ್ಕಾಗುತ್ತಿರಲಿಲ್ಲ. ಆ ನ್ಯೂಯಾರ್ಕ್‌ನ ಅಡುಗೆಮನೆ ಆ ದಿನ ಚಿಕ್ಕದೆಂದು ಕಾಣಿಸಿದ್ದರ ಹಿನ್ನೆಲೆ ವಿಸ್ತೀರ್ಣದಾಚೆಯ ಅದರ ವಿಸ್ತಾರದ್ದಾಗಿತ್ತು.

ಅತ್ಯಾಧುನಿಕ ಎಲೆಕ್ಟ್ರಿಕ್ ಕುಕರ್, ಬೆಂಕಿಯೇ ಇಲ್ಲದ ಇಂಡಕ್ಷನ್ ಒಲೆ, ಹೊಗೆ ಬರುವುದಕ್ಕಿಂತ ಮೊದಲೇ ಹಬೆಯನ್ನೂ ಒಳಗೆಳೆದುಕೊಳ್ಳುವ ನಿಷ್ವಾಸ- ಎಕ್ಸಾಫೋನ್, ಪೋರ್ಸಲಿನ್ ಪಾತ್ರೆ ಪಗಡೆ, ಇಂಚಿಂಚೂ ಲೆಕ್ಕಾಚಾರದ ಅಡುಗೆ ಕಟ್ಟೆ. ಎಲ್ಲವೂ ಇದ್ದರೂ ಅದನ್ನು ಅಡುಗೆ ಮನೆಯೆಂದು ಒಪ್ಪಲಿಕ್ಕೆ ನಮಗೆ ಅಲ್ಲಿರುವವರೆಗೂ ಸಾಧ್ಯವೇ ಆಗಲಿಲ್ಲ!

ಮಾನವಶಾಸ್ತ್ರಜ್ಞರು ಹೇಳುವಂತೆ ಬೆಂಕಿಯ ನಿಯಂತ್ರಣ ತಿಳಿದ ನಂತರ, ಅಡುಗೆ ಮಾಡುವುದು ಎಂಬ ಕ್ರಿಯೆ ಮನುಷ್ಯನ ಮುಂದಿನ ವಿಕಸನವನ್ನು ನಿರ್ದೇಶಿಸಿತಂತೆ. ಆದರೆ ಒಂದಂತೂ ಸತ್ಯ- ಮನುಷ್ಯ ನಾಗರೀಕತೆ ಬೆಳೆಯುವಾಗ ಮನೆಗಿಂತ ಮೊದಲು ಅಡುಗೆಮನೆ ರೂಪಗೊಂಡಿತ್ತು.

ಎಲ್ಲ ಶುರುವಾಗಿದ್ದು ಮೊದಲು ಬೆಂಕಿಯಿಂದ. ಗುಡಿಸಲು, ಗುಹೆಯಾಚೆ- ಮನುಷ್ಯ ಪಂಗಡಗಳು ಮುಸ್ಸಂಜೆ ಈ ಬೆಂಕಿಯ ಎದುರು ಬಯಲಿನಲ್ಲಿ ಜೊತೆ ಸೇರುತ್ತಿದ್ದರು. ಇವತ್ತಿಗೂ ಇದೇ ಗುಣವನ್ನು ಅಮೆಜಾನ್, ಅಂಡಮಾನ್ ಬುಡಕಟ್ಟು ಜನಾಂಗಗಳಲ್ಲಿ ನೋಡಬಹುದು. ಆ ಬೆಂಕಿಯ ಎದುರೇ ಮನುಷ್ಯನ ಮೊದಲ ಕೆಲವು ಗುಣವಿಶೇಷಗಳು ಹುಟ್ಟಿಕೊಂಡದ್ದು.

ಒಟ್ಟಾಗಿ ಕಾಯುವುದು, ಹಂಚಿಕೊಳ್ಳುವುದು, ಉದ್ದೇಶವೇ ಇಲ್ಲದೆ ಒಂದಿಷ್ಟು ಹೊತ್ತು ಜೊತೆಯಲ್ಲಿ ಕಳೆಯುವುದು, ಸುರಕ್ಷೆಯ ಭಾವ ಇದೆಲ್ಲ, ಅಡುಗೆಮನೆಯ ಮೂಲ ರೂಪ ಜನರು- ಹತ್ತಿರದವರು ಒಟ್ಟುಗೂಡುವ ಜಾಗವಾಗಿತ್ತು. ಆ ಜಾಗವೇ ಮುಂದೊಂದು ದಿನ ಬಯಲಿನ ಅಡುಗೆ ಮನೆಯಾದದ್ದು. ಅಲ್ಲಿಯೇ ಅಂದೊಂದು ದಿನ ಮೊದಲ ಅಡುಗೆ ತಯಾರಾದದ್ದು. ಅಲ್ಲಿ ಗೋಡೆ ಗಳಿರಲಿಲ್ಲ.

ಅಲ್ಲಿದ್ದದ್ದು ಬೆಂಕಿ, ಹೊಗೆ, ಹಸಿವು ಮತ್ತು ಮನುಷ್ಯ ಸಂಬಂಧಗಳು. ಆ ಬಯಲು ಅಡುಗೆಮನೆಯ ಅಗ್ನಿಯ ಸುತ್ತ ಮೊದಲ ತೊದಲ ಭಾಷೆ, ಒಡನಾಟ, ಪರಸ್ಪರ ಒಪ್ಪಂದ, ಸಹಕಾರ, ನಂಬಿಕೆ, ಮೋಸ, ಕ್ರಮೇಣ ಸ್ವಾರ್ಥ, ಪರ ಭಾವ, ಅಹಂ ಎಲ್ಲವೂ ಹುಟ್ಟಿದ್ದು. ಆಹಾರ ಮತ್ತು ಮನುಷ್ಯ ಮೆತ್ತಗಾಗಿದ್ದು. ಚಾಪಲ್ಯ ಬೆಳೆದದ್ದು. ಅದೇ ಅಗ್ನಿ ಇದೆಲ್ಲದಕ್ಕೂ ಸಾಕ್ಷಿ.

ಅಗ್ನಿಸಾಕ್ಷಿಯ ಮಹತ್ವದ ಮೂಲ ಅಲ್ಲಿಂದಲೇ ಬೆಳೆದು ಬಂದದ್ದೇ? ಇರಬಹುದು. ಒಟ್ಟಾರೆ ಜಗತ್ತಿನ ಪ್ರತಿಯೊಂದು ಸಂಸ್ಕೃತಿಗೂ ಈ ಅಗ್ನಿ ಅಲ್ಲಿಂದಿಲ್ಲಿಯವರೆಗೂ ಉರಿಯುತ್ತಲೇ ಸಾಕ್ಷಿಯಾಯಿತು ಎನ್ನುವುದಂತೂ ಸತ್ಯ. ಇವತ್ತಿಗೂ- ಒಟ್ಟಾಗಿ ಅಡುಗೆಮನೆಯಲ್ಲಿ ಸೇರಿದಾಗ, ಊಟ ಮಾಡುವಾಗ ಅದೇನೋ ಒಂದು ಬೆಚ್ಚನೆಯ, ಸುರಕ್ಷಿತ ಭಾವ ಎಲ್ಲರಲ್ಲೂ ಹುಟ್ಟುತ್ತದೆ.

ಅದೇ ಮೂಲ ಗುಣಗಳು ಮತ್ತೆ ಮೂರ್ತ ರೂಪ ಪಡೆಯುತ್ತವೆ. ಇವತ್ತಿಗೂ ಅಡುಗೆ ಮನೆ, ಮನೆಯ ಭಾವ ಕೇಂದ್ರ. ಇವತ್ತಿಗೂ ಯಾವುದೇ ಮನೆಯ ಅಸಲಿ ಶ್ರೀಮಂತಿಕೆ ವ್ಯಕ್ತವಾಗುವುದು ಚಾವಡಿಯ ಪೀಠೋಪಕರಣಗಳಲ್ಲಲ್ಲ, ಅಡುಗೆಮನೆಯಲ್ಲಿ ತಯಾರಾಗುವ ಪ್ರೀತಿಯಲ್ಲಿ.

ಅಡುಗೆ ಮನೆಯೆಂದರೆ ಮನೆಯೊಳಗಿನ ಇನ್ನೊಂದು ಜಗತ್ತು!

ಅಮೆರಿಕಾದ ಯಾವುದೇ ರಾಜ್ಯಕ್ಕೆ ಹೋದರೂ ಅಲ್ಲಿನ ಅಡುಗೆ ಮನೆ ಹೆಚ್ಚು ಕಡಿಮೆ ಒಂದೇ ರೀತಿ ಇರುತ್ತದೆ. ಅಲ್ಲಿ ತಯಾರಾಗುವ ಅಡುಗೆ ಪಿಜ್ಜಾ, ಬರ್ಗರ್ ಇತ್ಯಾದಿ ಕೂಡ ಹೆಚ್ಚು ಕಡಿಮೆ ಒಂದೇ ತೆರನಾಗಿರುತ್ತದೆ. ಆದರೆ ಭಾರತದಲ್ಲಿ ಹಾಗಲ್ಲ. ಮಲೆನಾಡಿನ ಅಡುಗೆಮನೆಯೇ ಬೇರೆ ಬಂಗಾಳದ ಅಡುಗೆಮನೆಯೇ ಬೇರೆ. ಬಯಲು ಸೀಮೆಯ ಅಡುಗೆ ಮನೆಗೂ ರಾಜಸ್ಥಾನದ ಅಡುಗೆಮನೆಗೂ ಎಲ್ಲಾ ಸಾಮ್ಯತೆ.

ಕರಾವಳಿಯ ಅಡುಗೆಮನೆಯಲ್ಲಿ ತೆಂಗಿನ ಎಣ್ಣೆಯ ಒಗ್ಗರಣೆ ಘಮಘಮಿಸಿದರೆ ಪಂಜಾಬಿನ ಅಡುಗೆಮನೆಯಲ್ಲಿ ಗೋಧಿ, ಬೆಣ್ಣೆ ಮತ್ತು ಸಾಸಿವೆ ಎಣ್ಣೆಯ ಘಮ. ಎಷ್ಟೊಂದು ವೈವಿಧ್ಯ. ಹಳ್ಳಿಗಳಲ್ಲಿ ಹೊಗೆ ಹಿಡಿದ ಗೋಡೆ, ಪಾತ್ರೆಗಳು, ಅವುಗಳ ಮೇಲೆ ಕೆತ್ತಿದ ಹೆಸರುಗಳು, ಎಲ್ಲವೂ ತಲಗಳಿ ನೆನಪುಗಳಾಗಿ ಕುಟುಂಬದಲ್ಲಿ ಪ್ರವಹಿಸುತ್ತವೆ.

ನಮ್ಮ ದೇಶದಲ್ಲಿ ಅಡುಗೆಮನೆ ಅಡುಗೆಯಾಚೆ, ಸಾಂಸ್ಕೃತಿಕ ಹೆಗ್ಗುರುತು. ನಮ್ಮಲ್ಲಿ ಆಹಾರವೇ ಪ್ರತ್ಯೇಕ ಸಂಸ್ಕೃತಿ. ಇದೆಲ್ಲ ಅತಿವಿಶೇಷವೆನಿಸುವುದು ಬೇರೆ ಹೊರದೇಶಗಳನ್ನು ಕಂಡಾಗ ಮಾತ್ರ. ವಿಕಸನದ ದಾರಿಯಲ್ಲಿ- ಸೂಕ್ಷ್ಮತೆ ಮತ್ತು ಕೌಶಲ್ಯದ ಕಾರಣಕ್ಕೆ ಅಡುಗೆಯೆಂಬ ಮಹತ್ವದ ಜವಾಬ್ದಾರಿಯನ್ನು ಸಮಾಜ ಸಕಾರಣ ಹೆಣ್ಣಿಗೆ ವಹಿಸಿದ್ದಿರಬಹುದು.

ಮುಂದೆ ಹೋದಂತೆ ಹೆಣ್ಣಿನ ಬದುಕಿನ ಮುಖ್ಯ ಭಾಗವೇ ಆಯಿತು ಎನ್ನುವುದು ಸುಳ್ಳಲ್ಲ. ಶತಮಾನಗಳ ಕಾಲ ಅಡುಗೆಮನೆ ಮಹಿಳೆಯರ ಜೀವನದ ಜೊತೆ ಆಳವಾಗಿ ಬೆಸೆದುಕೊಂಡಿತು. ಲಕ್ಷಾಂತರ ತಾಯಂದಿರು ಮತ್ತು ಅಜ್ಜಿಯರು ತಮ್ಮ ಪ್ರೀತಿಯನ್ನು ಅವಿರತ ಶ್ರಮದ ಮೂಲಕ ಇಲ್ಲಿಯೇ ವ್ಯಕ್ತಪಡಿಸಿದರು- ಬೆಳಗಿನ ಜಾವ ಎದ್ದು ಮನೆಯವರೆಲ್ಲರಿಗೂ ಅಡುಗೆ ಮಾಡುವುದು, ರಾತ್ರಿ ಕೊನೆಯಲ್ಲಿ ತಾವು ಊಟ ಮಾಡಿ ಕೊನೆಯಲ್ಲಿ ಮಲಗುವುದು.

ಕ್ರಮೇಣ ಮಹಿಳೆಯರಿಗೆ ಅಡುಗೆಮನೆ ಒಂದು ಬಂಧನದ ಸಂಕೇತವೆಂಬ ಭಾವವೂ ಹುಟ್ಟಿದ್ದು ಕೂಡ ಸರಿ. ಏಕೆಂದರೆ ಮಹಿಳೆಯರ ಕನಸುಗಳು ಮನೆಯ ಗೋಡೆಗಳ ಒಳಗೆ ಮಾತ್ರ ಸೀಮಿತವಾಗಿ ಬಿಟ್ಟವು. ಹೀಗಾಗಿ ಅಡುಗೆಮನೆ ಒಂದು ಕಡೆ ಕಾಳಜಿ ಮತ್ತು ಮಮತೆಯ ಸ್ಥಳವಾಗಿದ್ದರೆ, ಮತ್ತೊಂದು ಕಡೆ ತ್ಯಾಗದ ಪ್ರತೀಕವೂ ಆಯಿತು.

ಆದರೆ ಆಧುನಿಕ ಜೀವನ ಅಡುಗೆಮನೆಗಳನ್ನು ಸಂಪೂರ್ಣವಾಗಿ ಬದಲಿಸಿದೆ. ಇಂದು ಅಡುಗೆ ಮನೆಗಳು ಒಂದು ಪ್ರತಿಷ್ಠೆಯ ಸಂಕೇತವಾಗಿವೆ. ಮಾರ್ಬಲ್ ಕೌಂಟರ್‌ಗಳು, ಡಿಸೈನರ್ ಲೈಟಿಂಗ್, ವಿದೇಶಿ ಉಪಕರಣಗಳು, ಓಪನ್ ಲೇಔಟ್‌ಗಳು- ಇವೆಲ್ಲವೂ ಆಧುನಿಕ ಮನೆಯ ಗುರುತುಗಳಾಗಿ ಪರಿಣಮಿಸಿವೆ. ಇವುಗಳಿಗೆ ಹೆಸರಿಡುವಷ್ಟು ಕನ್ನಡವೇ ಬೆಳೆದಿಲ್ಲ.

ಸಾಮಾಜಿಕ ಜಾಲತಾಣಗಳು ಅಡುಗೆಮನೆಗಳನ್ನು ಬದುಕಿನ ಭಾಗಕ್ಕಿಂತ ಪ್ರದರ್ಶನದ ವಸ್ತುವಾಗಿ ಮಾಡಿಬಿಟ್ಟಿವೆ. ಅಪಾರ್ಟ್ಮೆಂಟ್ ಬ್ರೋಷರ್‌ಗಳಲ್ಲಿ ಅಡುಗೆಮನೆಗೆ ಎಲ್ಲಿಲ್ಲದ ಆಡಂಬರ, ಮಹತ್ವ. ವಿಚಿತ್ರವೆಂದರೆ, ಈಗೀಗ ಹಲವರು ಅಡುಗೆ ಮಾಡುವುದಕ್ಕಿಂತ ಅಡುಗೆಮನೆ ಅಲಂಕರಿಸಲು ಹೆಚ್ಚು ಹಣ ಖರ್ಚು ಮಾಡುತ್ತಾರೆ.

ಅಷ್ಟು ಮಾಡಿ ಆಮೇಲೆ ಫುಡ್ ಡೆಲಿವರಿ ಆಪ್‌ಗಳಲ್ಲಿ ಆಹಾರವನ್ನು ತರಿಸಿಕೊಳ್ಳುತ್ತಾರೆ. ಈಗ ಬೆಂಗಳೂರಿನಂತಹ ಊರುಗಳಲ್ಲಿ ಅಡುಗೆಮನೆ ಮೈಕ್ರೋವೇವ್ ಓವನ್‌ಗಳು ಬಿಸಿ ಮಾಡಿ ಕೊಳ್ಳಲಿಕ್ಕಷ್ಟೆ ಸೀಮಿತವಾಗುತ್ತಿವೆ. ಆದರೂ ಅಡುಗೆ ಮನೆಯೆಂಬ ಭಾವ ಮಾತ್ರ ನಮ್ಮೆಲ್ಲರಲ್ಲೂ ಇವತ್ತಿಗೂ ಹಾಗೆಯೇ ಉಳಿದುಕೊಂಡಿದೆ.

ಇವತ್ತಿಗೂ ನೋಡಿ, ಒಂದು ಕುಟುಂಬ ಯಾವುದೇ ಸಂಕಷ್ಟ ಎದುರಿಸುವಾಗ ಒಂದಾಗುವುದು, ಮಾತುಕತೆ ಎಲ್ಲವೂ ನಡೆಯುವುದು ಮತ್ತದೇ ಅಡುಗೆಮನೆಯಲ್ಲಿ. ಇವತ್ತಿಗೂ ಕುಟುಂಬವನ್ನು ಸಮಾಧಾನ ಮಾಡುವುದು ಮತ್ತದೇ ಅಡುಗೆಮನೆ. ಕೊರೊನಾ ಮಹಾಮಾರಿಯ ಸಮಯದಲ್ಲಿ ಏನಾಯಿತೆಂದು ನಮಗೆಲ್ಲ ನೆನಪಿರಬಹುದು. ಕೋವಿಡ್ ಹರಡುತ್ತಿದ್ದಂತೆ ಎಲ್ಲರೂ ಮನೆಯಲ್ಲಿ ಜೊತೆಯಾಗಿದ್ದು ಎಲ್ಲಿ? ನೆನಪಿಸಿಕೊಳ್ಳಿ.

ಚಾವಡಿಯಲ್ಲಲ್ಲ, ಅಡುಗೆಮನೆಯಲ್ಲಿ. ಲಕ್ಷಾಂತರ ಜನರು ಅಡುಗೆ ಮಾಡುವುದನ್ನು ಒಂದು ಥೆರಪಿ ಎಂದರು. ಕುಟುಂಬಗಳು ಮತ್ತೆ ಊಟದ ಮೇಜಿನ ಸುತ್ತ ಕೂತವು. ಹಳೆಯ ರೆಸಿಪಿಗಳು ನೆನಪಾದವು, ಅವುಗಳೇ ರೀಲ್ಸ್‌ಗಳಾದವು. ಆಗ ಆಧುನಿಕ ಜೀವನದಲ್ಲಿ ನಿಧಾನವಾಗಿ ಮರೆಯಾಗುತ್ತಿರುವ ಅಡುಗೆಮನೆ ಎಂಬ ನೆಲೆಯ ಭಾವ ಮತ್ತೆ ಅವಶ್ಯಕತೆಯೆನಿಸಿತು.

ಅಡುಗೆ ಮನೆಯಲ್ಲಿಯೇ ಕೂತು ಸಾಂಕ್ರಾಮಿಕವನ್ನು ಜಗತ್ತು ಎದುರಿಸಿತು. ಅಮ್ಮ ಇವತ್ತಿಗೂ ಫೋನ್ ಮಾಡಿದಾಗ ಐ ಲವ್ ಯು ಎಂದು ಹೇಳುವುದಿಲ್ಲ, ಅದನ್ನೇ ಊಟ ಆಯ್ತಾ, ತಿಂಡಿ ಆಯ್ತಾ? ಎಂದು ಪರೋಕ್ಷವಾಗಿ ಕೇಳುತ್ತಾರೆ. ಅಮ್ಮ ಹೋಂ ವರ್ಕ್ ಮಾಡುವಾಗ ಹಣ್ಣು ಕತ್ತರಿಸಿ ತಂದಿಟ್ಟು ಹೋಗುವುದು.

ತಡ ರಾತ್ರಿ ಕಂಪ್ಯೂಟರಿನಲ್ಲಿ ಕೆಲಸ ಮಾಡುವಾಗ ಅಪ್ಪ ಚಹಾ ಮಾಡಿ ತಂದು ಕೊಡುವುದು, ಸಂಗಾತಿ ಇಷ್ಟದ ಅಡುಗೆ ಮಾಡಿ ಬಡಿಸುವುದು. ನಮ್ಮ ಸುತ್ತಲಿನ ಬಹುತೇಕ ಪ್ರೀತಿ ವ್ಯಕ್ತವಾಗುವುದು ಆಹಾರದಿಂದ. ಆ ಪ್ರೀತಿ ತಯಾರಾಗಿ ಬರುವುದು ಅದೇ ಅಡುಗೆಮನೆಯಿಂದ.

ಭವಿಷ್ಯದಲ್ಲಿ ತಂತ್ರಜ್ಞಾನ ಅಡುಗೆಮನೆಗಳನ್ನು ಸಂಪೂರ್ಣವಾಗಿ ಬದಲಾಯಿಸಬಹುದು- ರೋಬೋಟ್‌ಗಳು, ಕೃತಕ ಬುದ್ಧಿಮತ್ತೆ, ಸ್ಮಾರ್ಟ್ ಉಪಕರಣಗಳು ಎಲ್ಲವೂ ಬರಬಹುದು. ಈಗಾಗಲೇ ಅಂತಹ ವ್ಯವಸ್ಥೆ ಕೆಲವು ದೇಶಗಳಲ್ಲಿ ಬಂದಾಗಿದೆ. ಆದರೆ ಒಂದು ಮಜವೆಂದರೆ ಅಮೆರಿಕಾದಂತಹ ದೇಶಗಳ ಅಡುಗೆಮನೆಗಳಲ್ಲಿ ಅಡುಗೆ ತಯಾರಾಗುವುದು ಈಗ ಹೆಚ್ಚು ಕಡಿಮೆ- ಸಂಪೂರ್ಣ ನಿಂತುಬಿಟ್ಟಿದೆ.

ಅಲ್ಲಿ ಏನಿದ್ದರೂ ಫ್ರೋಜನ್ ಸಿದ್ಧ ಅಡುಗೆಗಳು. ಅಮೆರಿಕನ್ನರು ಸೇವಿಸುವ ಶೇ.55ರಷ್ಟು ಆಹಾರಗಳು ಫ್ಯಾಕ್ಟರಿಯಲ್ಲಿ ತಯಾರಾಗಿ ಬರುತ್ತವೆ. ಬಿಸಿ ಮಾಡಿದರಾಯ್ತು- ತಿಂದರಾಯ್ತು. ಅದು ಬೇಸರವಾದರೆ ಫುಡ್ ಡೆಲಿವರಿ ಮಾಡಿಸಿಕೊಂಡರಾಯ್ತು! ಇಂತಹ ಎಡವಟ್ಟುಗಳು ಪಾಶ್ಚಾತ್ಯದಲ್ಲಿ ಮಾತ್ರ ಉಳಿದಿಲ್ಲ, ಅವು ಕ್ರಮೇಣ ಬೆಂಗಳೂರಿನ ಅಪಾರ್ಟ್ಮೆಂಟುಗಳನ್ನೂ ಸದ್ದಿಲ್ಲದೆ ಪ್ರವೇಶಿಸಿವೆ.

ಆದರೂ ಅಡುಗೆಮನೆಯೆಂಬ ಭಾವ ಮಾತ್ರ ಸಾರ್ವತ್ರಿಕ, ಇಂದಿಗೂ ಎಡೆಯೂ ಜಾಗೃತವಾಗಿದೆ. ಏಕೆಂದರೆ ಅದು ಅಡುಗೆಯಾಚೆಯ ನಮ್ಮ ಸಂಬಂಧದ ಹಸಿವಿನ ಅವಶ್ಯಕತೆ. ಅಡುಗೆ ಮನೆ- ಕೇವಲ ಅಡುಗೆ ತಯಾರಾಗುವ ಜಾಗವಷ್ಟೇ ಅಲ್ಲ.

ಮನುಷ್ಯ ಬಾಕಿ ಪ್ರಾಣಿಗಳಿಂದ ಪ್ರತ್ಯೇಕವಾಗಿದ್ದು, ಮನುಷ್ಯನಾಗಿದ್ದು ಅಡುಗೆ ಮನೆಯಲ್ಲಿ. ಇವತ್ತಿಗೂ ಮನುಷ್ಯ ಮನುಷ್ಯನಾಗುವುದು ಅದೇ ಅಡುಗೆಮನೆಯಲ್ಲಿ. ಅಮ್ಮ ಯಾವತ್ತೂ ಅಪ್ಪನಲ್ಲಿ ಅಡುಗೆ ಮನೆ ಸ್ವಲ್ಪ ಚಿಕ್ಕದು, ದೊಡ್ಡದಿರಬೇಕಿತ್ತು ಎನ್ನುತ್ತಿದ್ದಳು. ಆದರೆ ಈಗ ಅಮ್ಮ ಹಾಗನ್ನುವುದಿಲ್ಲ.

ಇರೋದು ನಾವಿಬ್ಬರು, ಅಡುಗೆ ಮನೆ ದೊಡ್ಡದಾಯಿತು, ಚಿಕ್ಕದಿರಬೇಕಿತ್ತು ಎನ್ನುತ್ತಾಳೆ. ಸ್ವಲ್ಪ ಹೊತ್ತು ಸುಮ್ಮನಿದ್ದು- ಇಲ್ಲ, ಮೊದಲೇ ಅಡುಗೆ ಮನೆ ದೊಡ್ಡದಿತ್ತು, ಈಗ ನೀವ್ಯಾರೂ ಇಲ್ಲದೆ ಅಡುಗೆ ಮನೆ ಚಿಕ್ಕದೆನಿಸುತ್ತದೆ ಎನ್ನುತ್ತಾಳೆ.

**- ಶಿಶಿರ್** ಹೆಗಡೆ

# ಎಸ್‌ಐಆರ್: ಸುಳ್ಳು ಜನಾಭಿಪ್ರಾಯ ಮೂಡಿಸಲು ಅಪಪ್ರಚಾರ

## ಶಾಸಕ ಸಿ.ಎನ್.ಬಾಲಕೃಷ್ಣ ಆರೋಪ | ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವಿಶೇಷ ಸಮಗ್ರ ಪರಿಷ್ಕರಣೆ ಬಿಎಲ್‌ಎ -2 ಕಾರ್ಯಾಗಾರ ಉದ್ಘಾಟನೆ

● ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಎಸ್‌ಐಆರ್ ಪ್ರಕ್ರಿಯೆಯ ಕುರಿತು ಸುಳ್ಳು ಜನಾಭಿಪ್ರಾಯ ಮೂಡಿಸಲು ಪ್ರಜಾಪ್ರಭುತ್ವವನ್ನು ಅಪಖ್ಯಾತಿಗೊಳಿಸಲು ವಿಪಕ್ಷದವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ದೂರಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ, ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ) ದ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವಿಶೇಷ ಸಮಗ್ರ ಪರಿಷ್ಕರಣೆ ಬಿಎಲ್‌ಎ -2 ಕಾರ್ಯಾಗಾರವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದ ಅವರು, ಮತದಾರರ ಪಟ್ಟಿಯನ್ನು ಶುದ್ಧ, ಹೆಚ್ಚು ಪಾರದರ್ಶಕ ಮತ್ತು ಹೆಚ್ಚು ವಿಶ್ವಾಸಾರ್ಹವಾಗಿಸುವುದು ಎಸ್‌ಐಆರ್‌ನ ಗುರಿಯಾಗಿದೆ. ಈ ಮಹತ್ವದ ಪ್ರಕ್ರಿಯೆಯ ಬಗ್ಗೆ ಗೊಂದಲವನ್ನು ಹರಡುವುದು ಪ್ರಜಾಪ್ರಭುತ್ವಕ್ಕೆ ಅನ್ಯಾಯ ಮಾತ್ರವಲ್ಲದೆ ನಾಗರಿಕರ ಹಕ್ಕುಗಳಿಗೆ ಮಾಡಿದ ಅವಮಾನವೂ ಆಗಿದೆ. ಕಾಂಗ್ರೆಸ್ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳು ನಕಾರಾತ್ಮಕ ರಾಜಕೀಯವನ್ನು ತ್ಯಜಿಸಿ, ಕಾನೂನು ಪ್ರಕ್ರಿಯೆಯನ್ನು ಗೌರವಿಸಿ ರಚನಾತ್ಮಕ ಸಲಹೆಗಳನ್ನು ನೀಡಬೇಕೆಂದು ಅವರು ಒತ್ತಾಯಿಸಿದರು.



ವಿರೋಧ ಪಕ್ಷಗಳು ತಮ್ಮ ಪ್ರಜಾಪ್ರಭುತ್ವ ವಿರೋಧಿ ಮನಸ್ಥಿತಿಯನ್ನು ಬಹಿರಂಗಪಡಿಸುತ್ತಿವೆ. ಪಾರದರ್ಶಕ ಮತದಾರರ ಪಟ್ಟಿಯು ಅವಕಾಶವಾದಿ ರಾಜಕೀಯವನ್ನು ದುರ್ಬಲಗೊಳಿಸುವುದರಿಂದ ವಿರೋಧ ಪಕ್ಷಗಳು ಚುನಾವಣಾ ಸ್ವಚ್ಛತೆಗೆ ಹೆದರುತ್ತಿವೆ. ಮೊದಲ ದಿನದಿಂದಲೇ ಬಗ್ಗೆ ಗೊಂದಲ, ಭಯ ಮತ್ತು ಸುಳ್ಳುಗಳನ್ನು ಬಿತ್ತುವ ಮೂಲಕ ಸಾರ್ವಜನಿಕರನ್ನು ದಾರಿತಪ್ಪಿಸಿವೆ. ಸುಪ್ರೀಂಕೋರ್ಟ್ ಚುನಾವಣಾ ಆಯೋಗವು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಿದೆ. ವಿರೋಧ ಪಕ್ಷಗಳು ಮತ್ತು ಅವರ ಮಿತ್ರಪಕ್ಷಗಳ ರಾಜಕೀಯವು ಸತ್ಯಗಳ ಮೇಲೆ ಅಲ್ಲ, ವದಂತಿಗಳು, ಅಪನಂಬಿಕೆ ಮತ್ತು ಮತಬ್ಯಾಂಕ್ ಲೆಕ್ಕಾಚಾರಗಳ ಮೇಲೆ ಆಧಾರಿತವಾಗಿದೆ ಎಂದರು.

ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಬಲಪಡಿಸಲು ಯಾರು ಬಯಸುತ್ತಾರೆ ಮತ್ತು ರಾಜಕೀಯ ಲಾಭಕ್ಕಾಗಿ ಯಾರು ಗೊಂದಲವನ್ನು ಹರಡುತ್ತಾರೆ ಎಂಬುದನ್ನು ಸಾರ್ವಜನಿಕರು ಈಗ ಅರ್ಥ ಮಾಡಿಕೊಂಡಿದ್ದಾರೆ, ಗೊಂದಲವನ್ನು ಹರಡುವವರಿಗೆ ಸೂಕ್ತ ಉತ್ತರ ನೀಡುತ್ತಾರೆ. ಎಲ್ಲಾ ಮತದಾರರು ವದಂತಿಗಳಿಗೆ ಗಮನ ಕೊಡಬಾರದು ಮತ್ತು ತಮ್ಮ ಮತದಾನದ ಹಕ್ಕುಗಳನ್ನು ರಕ್ಷಿಸಲು ಜಾಗೃತರಾಗಿರಬೇಕು ಎಂದು ಅವರು ಮನವಿ ಮಾಡಿದರು.

ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಬೂತ್‌ಗಳಲ್ಲಿ ಮತಪಟ್ಟಿ ಪರಿಷ್ಕರಣೆ ನಡೆಸುವ ಸಂದರ್ಭದಲ್ಲಿ ಜೆಡಿಎಸ್ ಕಾರ್ಯಕರ್ತರು ಎಚ್ಚರ ವಹಿಸಬೇಕು. ಕ್ಷೇತ್ರದ ಪ್ರತಿಯೊಂದು ಬೂತ್‌ಗಳಲ್ಲಿ ಬಿಎಲ್‌ಎಗಳು ಪರಿಷ್ಕರಣೆಗೆ ಹೋದಾಗ ಜೆಡಿಎಸ್ ಕಾರ್ಯಕರ್ತರು ಜತೆಯಲ್ಲಿದ್ದುಕೊಂಡು ಸಹಕಾರ ನೀಡಬೇಕು. ಮೃತರಾದವರು, ಗ್ರಾಮ, ಪಟ್ಟಣ ಬಿಟ್ಟು ಹೋಗಿರುವವರನ್ನು ಗುರುತಿಸಬೇಕು ಮತ್ತು ಎರಡು ಕಡೆಗಳಲ್ಲಿ ಬರುವ ಹೆಸರನ್ನು ತೆಗೆದು ಹಾಕುವ ಕೆಲಸ ಮಾಡಬೇಕು ಅದ್ದರಿಂದ ಈ ಬಗ್ಗೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕೆಂದು ಸಲಹೆ ನೀಡಿದರು.

ಅರ್ಹ ಮತದಾರರನ್ನು ಗುರುತಿಸಿ, ನೇರವಾಗಿ ಅರ್ಜಿಗಳನ್ನು ಪಡೆದು ಪರಿಷ್ಕರಣೆ ಮಾಡಿ ಅಧಿಕಾರಿಗಳಿಗೆ ಸಲ್ಲಿಸಬೇಕು. ಬಿಎಲ್‌ಎಗಳು ನಿರಂತರ ಪರಿಶ್ರಮದಿಂದ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯ ಕೈಗೊಂಡು, ಮುಂಬರುವ ಚುನಾವಣೆಯಲ್ಲಿ ಗೆಲುವು ಸಾಧಿಸಲು ಇಂದಿನಿಂದಲೇ ಕ್ರಿಯಾಶೀಲರಾಗಬೇಕು ಎಂದು ಅವರು ಸಲಹೆ ನೀಡಿದರು.

ಬಿಎಲ್‌ಎ ಕಾರ್ಯಾಗಾರದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ವೆಂಕಟೇಶ್ ಮತ್ತು ಅಶ್ವಿನ್ ಎಸ್‌ಐಆರ್ ಕುರಿತಂತೆ ಎಸ್‌ಐಆರ್‌ನ ಹಂತಗಳು ಮತ್ತು ಪ್ರತಿ ಹಂತದಲ್ಲಿ ಪ್ರಕ್ರಿಯೆಗಳ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಪರಮ ದೇವರಾಜೇಗೌಡ, ಜೆಡಿಎಸ್ ಮುಖಂಡರಾದ ಪರಮ ಕೃಷ್ಣೇಗೌಡ, ಬಿ.ಎಚ್.ಶಿವಣ್ಣ, ಎ. ಎನ್.ರಾಜಣ್ಣ, ಚಂದ್ರಪ್ಪ, ಚಿಕ್ಕಬಿಳ್ಳಿ ಪ್ರವೀಣ್, ರವೀಶ್, ವಿಕ್ರಂ, ಧರ್ಮ, ಉಮೇಶ್, ವಡ್ಡರಹಳ್ಳಿ ಚಂದ್ರು, ರಾಜಣ್ಣ, ದಿವಾಕರ, ವಾಸು, ಮೂಡನಹಳ್ಳಿ ಚಂದ್ರಣ್ಣ ಇನ್ನಿತರರಿದ್ದರು.

# ಶಾಲಾ ಮಕ್ಕಳ ದಾಖಲಾತಿ ಆಂದೋಲನ





● ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ವಡ್ಡರಹಳ್ಳಿ ಗ್ರಾ.ಪಂ. ವತಿಯಿಂದ ಶುಕ್ರವಾರ ವಿನೂತನವಾಗಿ ಶಾಲಾ ಮಕ್ಕಳ ದಾಖಲಾತಿ ಆಂದೋಲನಾ ಕಾರ್ಯಕ್ರಮ ಜರುಗಿತು.

ಶೈಕ್ಷಣಿಕ ಸಾಲಿನ ಶಾಲಾ ಆರಂಭೋತ್ಸವವನ್ನು ಗ್ರಾಪಂ ಪಿಡಿಒ ನಾಗರಾಜು, ಆಡಳಿತಾಧಿಕಾರಿಯೂ ಆಗಿರುವ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ ಅವರ ನೇತೃತ್ವದಲ್ಲಿ ವಡ್ಡರಹಳ್ಳಿ ಗ್ರಾಮದಲ್ಲಿ ಶಿಕ್ಷಕರು, ಗ್ರಾಮದ ಮುಖಂಡರೊಂದಿಗೆ ಆಂದೋಲನಾ ಹಮ್ಮಿಕೊಂಡು ಕಡ್ಡಾಯವಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸುವಂತೆ ಮನೆ ಮನೆಗೆ ತೆರಳಿ ಪೋಷಕರಲ್ಲಿ ಮನವಿ ಮಾಡಲಾಯಿತು.

ಗ್ರಾಮದಲ್ಲಿ ಒಂದನೇ ತರಗತಿಯಿಂದ 7ನೇ ತರಗತಿ ತನಕ ಕನ್ನಡ ಮತ್ತು ಆಂಗ್ಲಮಾಧ್ಯಮದಲ್ಲಿ ಉಚಿತವಾಗಿ ಗುಣಮಟ್ಟದ ಶಿಕ್ಷಣ ಬೋಧನಾ ಕ್ರಮವನ್ನು ಕಡ್ಡಾಯಗೊಳಿಸಲಾಗಿದೆ. ಅಧಿಕ ಹಣವನ್ನು ತೆತ್ತು ಖಾಸಗಿ ಶಾಲೆಗೆ ಸೇರಿಸುವ ಬದಲು ಮನೆ ಬಳಿಯೇ ಉತ್ತಮ ಪರಿಸರದೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ನಿಮ್ಮೂರಿನ ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸಿ ಸರಕಾರದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಬಿಇಒ ನಾರಾಯಣ ಅವರು ಗ್ರಾಮಸ್ಥರಲ್ಲಿ ಮನವಿ ಮಾಡಿದರು.

# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗೆ ಅರ್ಜಿ




● ಪ್ರಜೋದಯ ವರದಿ

**ಹಾಸನ:** ಹಾಸನ ಶಿಶು ಅಭಿವೃದ್ಧಿ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ 32 ಅಂಗನವಾಡಿ ಕಾರ್ಯಕರ್ತೆ ಹಾಗೂ 104 ಅಂಗನವಾಡಿ ಸಹಾಯಕಿಯರ ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ, ಶಿಶು ಅಭಿವೃದ್ಧಿ ಯೋಜನಾ ಕಚೇರಿಯಲ್ಲಿ ಅರ್ಜಿಯನ್ನು ಪಡೆದು ಅವಶ್ಯಕ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ, ಅರ್ಜಿ ಸಲ್ಲಿಸಲು ಜೂ.29 ರಂದು ಕೊನೆಯ ದಿನಾಂಕವಾಗಿರುತ್ತದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

# ಆಡಳಿತ ವೈಫಲ್ಯ ಖಂಡಿಸಿ ಹಿಂದೂ ಹಿತ ರಕ್ಷಣಾ ವೇದಿಕೆ ಪ್ರತಿಭಟನೆ

## ಚಿಕ್ಕಸತ್ತಿಗಾಲ್‌ನ ಗೋವು ಕಳ್ಳತನ, ಹಿಂಸೆ ಪ್ರಕರಣದ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

● ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಚಿಕ್ಕಸತ್ತಿಗಾಲ್ ಗ್ರಾಮದಲ್ಲಿ ಗೋವು ಕಳ್ಳತನ ಹಾಗೂ ಹಿಂಸೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಹಿಂದೂ ಹಿತ ರಕ್ಷಣಾ ವೇದಿಕೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಪ್ರತಿಗ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಪ್ರಮುಖರು, ಕಳೆದ 8 ರಿಂದ 10 ದಿನಗಳಿಂದ ಬಕ್ರೀದ್ ಹಬ್ಬದ ಕುರ್ಬಾನಿಗಾಗಿ ಚಿಕ್ಕಸತ್ತಿಗಾಲ್ ಗ್ರಾಮದ ಹೋರಿ ಗೋವನ್ನು ಕದ್ದು, ಮೇವು ಮತ್ತು ನೀರು ನೀಡದೆ ಕಾಫಿ ತೋಟದಲ್ಲಿ ಬಿಗಿಯಾದ ಹಗ್ಗದಿಂದ ಕಟ್ಟಿ ಚಿತ್ರಹಿಂಸೆ ನೀಡಲಾಗಿತ್ತು. ಗ್ರಾಮದ ತೊಟ್ಟಿಮನೆ ಹೋಂಸ್ಟೇಗೆ ಹೊಂದಿಕೊಂಡಿರುವ ಅಯಾಜ್ ಹಾಗೂ ಸೈಯ್ಯದ್ ಮಾಲೀಕತ್ವದ ತೋಟದಲ್ಲಿ ಗೋವುಗಳನ್ನು ಕಟ್ಟಿ ಹಾಕಿರುವುದು ಕಂಡು ಬಂದಿದ್ದು, ಹೋಂಸ್ಟೇ ಮಾಲೀಕ ಸೈಯ್ಯದ್ ಮುಫೀಜ್ ಇದರಲ್ಲಿ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ ಎಂದು ದೂರಿದರು.

ಮೇ 27 ರಂದು ಹಿಂದೂ ಹಿತ ರಕ್ಷಣಾ ವೇದಿಕೆಯ ಕಾರ್ಯಕರ್ತರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ವೇಳೆ ನಾಲ್ಕು ಚಿಕ್ಕ ಹೋರಿಗಳೊಂದಿಗೆ ದೊಡ್ಡ ನಂದಿ ಹೋರಿಯನ್ನೂ ಕಟ್ಟಿಹಾಕಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಭಾವಚಿತ್ರಗಳೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಡಿವೈಎಸ್ಪಿ




ಹಾಗೂ ನಗರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಅವರಿಗೆ ಮಾಹಿತಿ ನೀಡಲಾಗಿತ್ತು. ಮಾಹಿತಿ ಪಡೆದ ಪೊಲೀಸರು ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ತೆರಳಿದಾಗ ದೊಡ್ಡ ಹೋರಿಯನ್ನು ಹಿಡಿಯಲು ಸಾಧ್ಯವಾಗಿರಲಿಲ್ಲ. ಮೇವು ಮತ್ತು ನೀರಿಲ್ಲದೆ ಹೈರಾಣಾಗಿದ್ದ ಹೋರಿ ಅಸ್ವಸ್ಥ ಸ್ಥಿತಿಯಲ್ಲಿ ವರ್ತಿಸುತ್ತಿತ್ತು. ಅಲ್ಲಿದ್ದ ಇತರೆ ಹೋರಿಗಳನ್ನು ಬೇರೆಡೆಗೆ ಸಾಗಿಸಲಾಗಿದ್ದು, ಅವುಗಳನ್ನು ಹತ್ಯೆ ಮಾಡಿರುವ ಶಂಕೆಯಿದೆ ಎಂದರು.

ಉಳಿದಿದ್ದ ದೊಡ್ಡ ಹೋರಿಯನ್ನು ಗೋಶಾಲೆಗೆ ಸಾಗಿಸಲು ಕಾರ್ಯಕರ್ತರು ಹರಸಾಹಸ ಪಟ್ಟರು. ಆದರೆ, ಹೋಂಸ್ಟೇ ಮಾಲೀಕ ಸೈಯ್ಯದ್ ಮುಫೀಜ್ ತನ್ನ ಜಾಗದ ಮೂಲಕ ಹೋಗಲು ಅವಕಾಶ ನೀಡದೆ ಅಡ್ಡಿಪಡಿಸಿದ್ದರಿಂದ ಚಿಕಿತ್ಸೆ ನೀಡಲು ವಿಳಂಬವಾಗಿದ್ದು, ಸುಮಾರು 2.5 ಕಿಲೋಮೀಟರ್ ಸುತ್ತುವರಿದು ಪಿಕಪ್ ವಾಹನದಲ್ಲಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಹೋರಿ ಸಾವನ್ನಪ್ಪಿದೆ ಎಂದು ದೂರಿದರು.

ಪೊಲೀಸ್ ಇಲಾಖೆ ಸಮಯೋಚಿತ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ. ತಕ್ಷಣ ವಾಹನ ವ್ಯವಸ್ಥೆ ಮಾಡದೇ ಹಾಗೂ ಹತ್ತಿರದ ದಾರಿಯನ್ನು ಬಳಸಲು ಅವಕಾಶ ಕಲ್ಪಿಸದೇ ನಿರ್ಲಕ್ಷ್ಯ ತೋರಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಗೋಹತ್ಯೆ ನಿಷೇಧ ಕಾನೂನು ರಾಜ್ಯದಲ್ಲಿ ಜಾರಿಯಲ್ಲಿದ್ದರೂ, ನಂದಿ ಹೋರಿಯನ್ನು ಕದ್ದು ಹಿಂಸೆ ನೀಡಿ ಹತ್ಯೆ ಮಾಡಿರುವ ಬಗ್ಗೆ ಪಾರದರ್ಶಕ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ಪ್ರತಿಭಟನಾಕಾರರು ಉಪ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಹಿಂದೂ ಮುಖಂಡರಾದ ರಘು ಹಾಗೂ ಹಿಂದೂ ಹಿತ ರಕ್ಷಣಾ ವೇದಿಕೆಯ ಪದಾಧಿಕಾರಿಗಳಾದ ಮಂಜುನಾಥ್ ಕಬ್ಬಿನಗದ್ದೆ, ಕೌಶಿಕ್ ಹೆಚ್.ಎಂ., ಶಶಿಧರ್ ನಡಹಳ್ಳಿ, ಕಾಡುಮನೆ ವಿಜಯಕುಮಾರ್, ದುಶ್ಯಾಂತ್ ಗೌಡ, ಶಿವು ಜೆಪ್ಪಿ, ದೀಪಕ್, ಸಂತೋಷ್, ರವಿ ಹೆಬ್ಬಸಾಲೆ, ಶ್ರೀಜಿತ್ ಗೌಡ, ಹರ್ಷ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ನಾಳೆ ವಿದ್ಯುತ್ ವ್ಯತ್ಯಯ

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕೆ.ಐ.ಎ.ಡಿ.ಬಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಮೇ.31 ರಂದು ಬೆಳಗ್ಗೆ 10 ಗಂಟೆಯಿಂದ 6 ಗಂಟೆಯವರೆಗೆ ಕೆ.ಐ.ಎ.ಡಿ.ಬಿ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಜಯಂತಿ ಕಾಫಿ ವರ್ಕ್ಸ್, ಎಸ್. ಎಸ್ ಗ್ರಾನೈಟ್ಸ್ , ಹೆಚ್.ಪಿ.ಸಿ.ಎಲ್, ಕ್ಲೆನೆ ಪ್ಯಾಕ್ಸ್ ಮತ್ತಿತರ ಕೈಗಾರಿಕಾ ಪ್ರದೇಶಗಳು, ಕೌಶಿಕ ಮಾರ್ಗದ ಪ್ರದೇಶಗಳು, ದೊಡ್ಡಬಸವನಹಳ್ಳಿ, ಕಾಚನಾಯಕನಹಳ್ಳಿ, ಸಮುದ್ರವಳ್ಳಿ, ನಾಗತಿಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರೀಕ್ಷೆಯ ಜ್ಞಾನದ ಜೊತೆಗೆ ಬದುಕಿನ 'ನೀಟ್' ಸಂಸ್ಕಾರವೂ ಮುಖ್ಯ

● ಪ್ರಜೋದಯ ವರದಿ

**ಹಳೇಬೀಡು:** ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳಿಗೆ 'ನೀಟ್' ನಂತಹ ಕಠಿಣ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವುದು ತಿಳಿದಿದೆಯೇ ಹೊರತು, ಸಮಾಜದಲ್ಲಿ ಅಚ್ಚುಕಟ್ಟಾಗಿ ಬದುಕುವುದು ಹೇಗೆ ಎಂಬುದು ತಿಳಿಯುತ್ತಿಲ್ಲ ಎಂದು ಪುಷ್ಪಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಅವರು ಬೇಸರ ವ್ಯಕ್ತಪಡಿಸಿದರು.

ಮಠದಲ್ಲಿ ಹಮ್ಮಿಕೊಂಡಿದ್ದ ಐದಾರು ಜಿಲ್ಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳ ಗೌರವ ಸಮರ್ಪಣಾ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀಗಳು ಆಶೀರ್ವಚನ ನೀಡಿ ಮಾತನಾಡಿದ ಅವರು, ಕೇವಲ ವಿದ್ಯಾರ್ಥಿಗಳು ಅಂಕ ಗಳಿಕೆಯಷ್ಟೇ ಜೀವನವಲ್ಲ, ಪರೀಕ್ಷೆಯ ಜ್ಞಾನದ ಜೊತೆಗೆ ಉತ್ತಮ ಬದುಕನ್ನು ಕಟ್ಟಿ



ಕೊಳ್ಳುವ ಸಂಸ್ಕಾರವೂ ಅಷ್ಟೇ ಮುಖ್ಯವಾಗಿದೆ ಎಂದರು.

ಸಮಾಜದಲ್ಲಿ ಶಿಕ್ಷಣ ಮತ್ತು ಸಂಸ್ಕಾರದ ಮಹತ್ವವನ್ನು ವಿವರಿಸಿದ ಶ್ರೀಗಳು, ಮರದ ಬೇರುಗಳಿಗೆ ನೀರೆರೆದರೆ ಮಾತ್ರ ಅದು ಮೇಲ್ಗಡೆ ಹಣ್ಣು-ಹಂಪಲುಗಳನ್ನು ನೀಡಲು ಸಾಧ್ಯ. ಹಾಗೆಯೇ ಸಮಾಜದಲ್ಲಿ ವಿದ್ಯಾರ್ಥಿಗಳೆಂಬ ಗಿಡಗಳಿಗೆ ಮಠ- ಮಾನ್ಯಗಳು, ಪೋಷಕರ ಹಾಗೂ ಸಮಾಜದ ಪ್ರೋತ್ಸಾಹ ಮತ್ತು ಮಾರ್ಗದರ್ಶನದ ನೀರು ದೊರೆತಾಗ ಮಾತ್ರ ಅವರು ಮುಂದೆ ದೇಶದ ಉತ್ತಮ ಪ್ರಜೆಗಳಾಗಿ ಸತ್ಫಲ ನೀಡಬಲ್ಲರು ಎಂದರು.

ಇತ್ತೀಚಿನ ದಿನಗಳಲ್ಲಿ ಕೇವಲ ಜನರನ್ನು ಸೇರಿಸುವ ಅಥವಾ ರಾಜಕೀಯ ಭಾಷಣಗಳನ್ನು ಕೇಳಿಸುವ ಉದ್ದೇಶಕ್ಕಾಗಿ ಪ್ರತಿಭಾ ಪುರಸ್ಕಾರಗಳನ್ನು ಆಯೋಜಿಸಲಾಗುತ್ತಿದೆಯೇ ಹೊರತು, ವಿದ್ಯಾರ್ಥಿಗಳಲ್ಲಿರುವ ನಿಜವಾದ ಜ್ಞಾನ ಚೈತನ್ಯವನ್ನು ಗುರುತಿಸಿ, ಅದಕ್ಕೆ ತಕ್ಕ ಸಂಸ್ಕಾರವನ್ನು ನೀಡುವ ನೈಜ ಉದ್ದೇಶ ಮರೆಯಾಗುತ್ತಿರುವುದಕ್ಕೆ ಶ್ರೀಗಳು ತೀವ್ರ ಕಳವಳ ವ್ಯಕ್ತಪಡಿಸಿದರಲ್ಲದೆ, ಇಂದಿನ ಸಮಾಜದಲ್ಲಿ ಧರ್ಮ, ನ್ಯಾಯ ಮತ್ತು ನೀತಿಗಳು ದುರ್ಬಲಗೊಳ್ಳುತ್ತಿದ್ದು, ಜನರು ಕೇವಲ ತಮ್ಮ ಸ್ವಾರ್ಥ ಹಾಗೂ ದಿನನಿತ್ಯದ ಬದುಕಿಗೆ ಸೀಮಿತರಾಗುತ್ತಿದ್ದಾರೆ ಎಂದು ವಿಷಾದಿಸಿದರು.

ವಿದ್ಯಾರ್ಥಿಗಳಿಗೆ ಸಮಾಜ ಮತ್ತು ಧರ್ಮದ ಆಳವಾದ ಕಲ್ಪನೆಗಳು ಸುಲಭವಾಗಿ ಅರ್ಥವಾಗದಿದ್ದರೂ, ಇಂತಹ ಪುರಸ್ಕಾರ ಕಾರ್ಯಕ್ರಮಗಳು ಅವರ ಮುಂದಿನ ಭವಿಷ್ಯದ ದಾರಿಗೆ ಜ್ಞಾನದ ಬೆಳಕನ್ನು ನೀಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಹೀಗಾಗಿ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿ ಸುವ ಕಾರ್ಯ ನಿರಂತರವಾಗಿ ನಡೆಯ ಬೇಕೆಂದರು.

ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ. ಶಿವರಾಜು ಮಾತನಾಡಿ, ಮಠ-ಮಾನ್ಯಗಳು ಮತ್ತು ಪೂಜ್ಯರು ತೋರುವ ಸನ್ಮಾರ್ಗದಲ್ಲಿ ಭಕ್ತರು ಮುನ್ನಡೆಯಬೇಕಾದ ಅಗತ್ಯವಿದ್ದು, ಮುಂದಿನಪೀಳಿಗೆಯಲ್ಲೂ ಭಕ್ತಿ ಮತ್ತು ಸಂಸ್ಕಾರವನ್ನು ಬೆಳೆಸಬೇಕಾಗಿದೆ ಎಂದು ಸಲಹೆ ನೀಡಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾದ ವಿವಿಧ ಜಿಲ್ಲೆಗಳ ನೂರಾರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮಠದ ವತಿಯಿಂದ ಆತ್ಮೀಯವಾಗಿ ಗೌರವಿಸಲಾಯಿತು.

ಮೋಹನ್, ಹಳೇಬೀಡು ಕುಮಾರ್, ಸುನೀಲ್ ಪಡುವಳಲು, ಪುಷ್ಪಗಿರಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಜಿಲ್ಲಾ ಯೋಜನಾಧಿಕಾರಿ ವಿನುತಾ ಧನಂಜಯ್, ಮಠದ ಪ್ರಮುಖರು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಇಂದು ಪುಷ್ಪಗಿರಿ ಶ್ರೀ ಬಸವರಾಜೇಂದ್ರ ಸ್ವಾಮೀಜಿ ಪುಣ್ಯ ಸಂಸ್ಮರಣೆ

● ಪ್ರಜೋದಯ ವರದಿ

**ಬೇಲೂರು:** ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿ ಲಿಂಗೈಕ್ಯರಾದ ಪೂಜ್ಯ ಶ್ರೀ ಬಸವರಾಜೇಂದ್ರ ದೇಶಿಕೇಂದ್ರ ಮಹಾಸ್ವಾಮೀಜಿಯವರ 22ನೇ ವರ್ಷದ ಪುಣ್ಯ ಸಂಸ್ಮರಣಾ ಕಾರ್ಯಕ್ರಮವನ್ನು ಮೇ 30ರ ಶನಿವಾರದಂದು ತಾಲ್ಲೂಕಿನ ಪ್ರಸಿದ್ಧ ಪುಷ್ಪಗಿರಿ ಮಹಾಸಂಸ್ಥಾನ ಮಠದ ಆವರಣದಲ್ಲಿ ಅತ್ಯಂತ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದೆ ಎಂದು ಪುಷ್ಪಗಿರಿ ಸಂಸ್ಥಾನದ ಪೀಠಾಧೀಶರಾದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಶ್ರೀಮಠದ ಆವರಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಪೂಜ್ಯ ಶ್ರೀಗಳು ಲಿಂಗೈಕ್ಯ ಶ್ರೀ ಬಸವರಾಜೇಂದ್ರ ಸ್ವಾಮೀಜಿಯವರು ಲಕ್ಷಾಂತರ ಭಕ್ತರನ್ನು ಸನ್ಮಾರ್ಗದಲ್ಲಿ ಮುನ್ನಡೆಸುವ ಮೂಲಕ ಸಮಾಜದ ಏಳಿಗೆಗಾಗಿ ವಿಶೇಷವಾಗಿ ಶ್ರಮಿಸಿದ್ದರು. ಬೇಲೂರು ತಾಲೂಕಿನ ಚೀಲನಹಳ್ಳಿಯಲ್ಲಿ ವಾಸವಿದ್ದ ಶ್ರೀಗಳು, ತಮ್ಮ ಕೊನೆಯ ದಿನಗಳಲ್ಲಿ ಪುಷ್ಪಗಿರಿ ಮಹಾಸಂಸ್ಥಾನಕ್ಕೆ ಬಂದು ಲಿಂಗೈಕ್ಯರಾಗಿದ್ದರು. ಅವರು ಲಿಂಗೈಕ್ಯರಾಗಿ 22 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ, ಪ್ರತಿವರ್ಷದ ಪದ್ಧತಿಯಂತೆ ಈ ವರ್ಷವೂ ನಾಡಿನ ಶ್ರೇಷ್ಠ ಸಾಧಕರನ್ನು ಮತ್ತು ವಿವಿಧ ಮಠಗಳ ಗುರುವರ್ಯರನ್ನು ಆಹ್ವಾನಿಸಿ ಈ ಬೃಹತ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.



**ಜಂಗಮ ದೀಕ್ಷೆ ಮತ್ತು ಸಾಮೂಹಿಕ ಲಿಂಗಪೂಜೆ:**

ಶನಿವಾರ ಬೆಳಿಗ್ಗೆ 7 ಗಂಟೆಗೆ ಶ್ರೀಮಠದ ಪುರೋಹಿತ ವರ್ಗದವರಿಂದ ಧಾರ್ಮಿಕ ಸಂಸ್ಕಾರದ ವಿಧಿವಿಧಾನಗಳು ಆರಂಭಗೊಳ್ಳಲಿವೆ. ಇದೇ ಸಂದರ್ಭದಲ್ಲಿ ಜಂಗಮ ವಟುಗಳಿಗೆ ದೀಕ್ಷಾ ಸಂಸ್ಕಾರ ನೆರವೇರಲಿದೆ ಎಂದರು.

ಬಿ.ಬಿ. ಶಿವರಾಜ್, ಎಂ.ಸಿ. ಕುಮಾರ್, ಸುನಿಲ್ ಪಡವಳಲು, ಗಣೇಶ್ ಹಾಗೂ ಶ್ರೀಮಠದ ಹೇಮಂತ್ ಉಪಸ್ಥಿತರಿದ್ದರು.

# ಜನಪರ ಆಡಳಿತ ನೀಡಿದ ಸಿದ್ದರಾಮಯ್ಯ

● ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜನಪರ ಆಡಳಿತ, ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿಯ ಸಮನ್ವಯದ ಮೂಲಕ ಕರ್ನಾಟಕದ ರಾಜಕೀಯಕ್ಕೆ ಹೊಸ ದಿಕ್ಕು ನೀಡಿದ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ದೂರದೃಷ್ಟಿಯ ನಾಯಕತ್ವದಿಂದ ರಾಜ್ಯದ ಲಕ್ಷಾಂತರ ಜನರ ಬದುಕಿಗೆ ಆಶಾಕಿರಣವಾಗಿದ್ದಾರೆ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಎ. ಗೋಪಾಲಸ್ವಾಮಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅನ್ನಭಾಗ್ಯ, ಕ್ಷೀರಭಾಗ್ಯ, ಗೃಹಲಕ್ಷ್ಮೀ ಸೇರಿದಂತೆ ಜನಪರ ಯೋಜನೆಗಳ ಮೂಲಕ ಬಡವರು, ಮಹಿಳೆಯರು ಮತ್ತು ಸಾಮಾನ್ಯ ಕುಟುಂಬಗಳ



ಜೀವನದಲ್ಲಿ ಹೊಸ ಭರವಸೆ ಮೂಡಿಸಿದ ಅವರ ಸೇವೆ ಸದಾ ಸ್ಮರಣೀಯ. ಜಾತಿಜನಗಣತಿ ನೀಡುವ ಮೂಲಕ ಕಟ್ಟಕಡೇಯ ವ್ಯಕ್ತಿಗೂ ಕೂಡ ಸರ್ಕಾರದ ಸೌಲಭ್ಯ ಪಡೆಯಬೇಕೆಂಬ ಆಶಯ ಇಟ್ಟುಕೊಂಡ ಮಹಾನ್ ನಾಯಕ ಎಂದು ಹೇಳಿದರು.

ಅಭಿವೃದ್ಧಿಯ ಪಥದಲ್ಲಿ ಕರ್ನಾಟಕವನ್ನು ದೃಢವಾಗಿ ಮುನ್ನಡೆಸಿದ ಅಹಿಂದ ನಾಯಕ ಸಿದ್ದರಾಮಯ್ಯ ಅವರ ಸುದೀರ್ಘ ರಾಜಕೀಯ ಜೀವನ ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ. ಜನಸೇವೆಯನ್ನೇ ಧ್ಯೇಯವನ್ನಾಗಿಸಿಕೊಂಡ ಅವರ ನಾಯಕತ್ವ ರಾಜ್ಯದ ಪ್ರಗತಿಗೆ ಬಲವಾದ ಅಡಿಪಾಯವಾಗಿದ್ದು, ಅವರ ಸೇವೆ ನಮ್ಮೆಲ್ಲರ ಹೆಮ್ಮೆಯಾಗಿದ್ದು ಅವರ ನಾಯಕತ್ವದ ಗುಣ ನಮ್ಮೆಲ್ಲರಿಗೆ ಮಾರ್ಗದರ್ಶನವಾಗಿದೆ.

ಸಂವಿಧಾನವೇ ನನ್ನ ಧರ್ಮ, ಮತದಾರ ಪ್ರಭುಗಳೇ ನನ್ನ ದೇವರು ಎಂಬ ಹೇಳಿಕೆಯ ಮುಖಾಂತರ ರಾಜ್ಯದ 6 ಕೋಟಿ ಕನ್ನಡಿಗರ ಹೃದಯಗೆದ್ದ ಸಿದ್ದರಾಮಯ್ಯನವರಿಗೆ ಸಿದ್ದರಾಮಯ್ಯನೇ ಸಾಟಿ ಎಂದರು.

# ಶರಣ ಸಾಹಿತ್ಯ ಪರಿಷತ್‌ನಲ್ಲಿ ಅನಗತ್ಯ ಗೊಂದಲ

## ರಾಜ್ಯಾಧ್ಯಕ್ಷರು ಜಿಲ್ಲೆಗೆ ಭೇಟಿ ನೀಡಿ ಚರ್ಚಿಸುವಂತೆ ನಿರ್ದೇಶಕರ ಮನವಿ

● ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಶರಣ ಸಾಹಿತ್ಯ ಪರಿಷತ್ತು ಎಂ.ಎನ್.ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ಅನಗತ್ಯ ಗೊಂದಲ ಸೃಷ್ಟಿಸಲಾಗುತ್ತಿದೆ ಎಂದು ಹಾಸನ ತಾಲ್ಲೂಕು ಘಟಕದ ಅಧ್ಯಕ್ಷ ಪುಟ್ಟರಾಜು ಅವರ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ತಣ್ಣೀರುಹಳ್ಳಿ ಮಠದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಎಂ.ಎನ್.ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಮಾಸಿಕ ನಿರ್ದೇಶಕರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯಾಧ್ಯಕ್ಷರು ಹಾಸನಕ್ಕೆ ಭೇಟಿ ನೀಡಿ ಎಲ್ಲರೊಂದಿಗೆ ಚರ್ಚಿಸಿದರೆ ಸಂಸ್ಥೆಯ ಬಲವರ್ಧನೆಗೆ ಸಹಾಯಕವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ತಾಲ್ಲೂಕು ಘಟಕದ ಅಧ್ಯಕ್ಷರು ಹಾಗು ಕದಳಿ ಮಹಿಳಾ ವೇದಿಕೆಯ ಜಿಲ್ಲಾ ಅಧ್ಯಕ್ಷೆ ತೀರ್ಥಕುಮಾರಿ ವೆಂಕಟೇಶ್ ಸೇರಿ ಅನೇಕರು ಒಮ್ಮತದಿಂದ ಎಂ.ಎನ್.ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲಿಯೇ ಮುಂದುವರಿಯಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಅರಕಲಗೂಡು, ಅಲೂರು, ಸಕಲೇಶಪುರ, ಚನ್ನರಾಯಪಟ್ಟಣ ಸೇರಿದಂತೆ ವಿವಿಧ ತಾಲ್ಲೂಕುಗಳ ಪ್ರತಿನಿಧಿಗಳು ಸಹ ಈ ಅಭಿಪ್ರಾಯಕ್ಕೆ ಬೆಂಬಲ ಸೂಚಿಸಿದರು. ಸಭೆಯಲ್ಲಿ ಸಂಘಟನಾತ್ಮಕವಾಗಿ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು.



ಬೇಲೂರು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹೆಬ್ಬಾಳ ಹಾಲಪ್ಪ ಮಾತನಾಡಿ, ಶರಣ ಸಾಹಿತ್ಯ ಪರಿಷತ್ತು ಸುತ್ತೂರಿನ ಪರಮಪೂಜ್ಯ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಕನಸಿನ ಸಂಸ್ಥೆಯಾಗಿದ್ದು, 12ನೇ ಶತಮಾನದ ಶಿವ ಶರಣರ ಸಂದೇಶಗಳನ್ನು ವಿಶ್ವದಾದ್ಯಂತ ಹರಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಸಂಸ್ಥೆಯ ಬೈಲಾ ಹಾಗು ನಿಯಮಾವಳಿಗಳಂತೆ ಅಧ್ಯಕ್ಷರ ಬದಲಾವಣೆ ಕುರಿತು ರಾಜ್ಯಾಧ್ಯಕ್ಷರು ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿದ್ದು, ಅದರಲ್ಲಿ ಯಾವುದೇ ಆಕ್ಷೇಪವಿಲ್ಲ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕಟ್ಟಾಯ ಶಿವಕುಮಾರ್, ಕದಳಿ ಮಹಿಳಾ ವೇದಿಕೆಯ ಶಶಿರೇಖಾ, ಗಿರಿಜಾ ನಿರ್ವಾಣಿ, ಕಾರ್ಯದರ್ಶಿ ವಿಜಯ ಧರ್ಮಪ್ಪ, ಬೇಲೂರು ಕಾರ್ಯದರ್ಶಿ ರಾಜಕುಮಾರ, ಖಜಾಂಚಿ ಧನಂಜಯ, ಜಿಲ್ಲಾ ಯುವ ಘಟಕದ ಅಧ್ಯಕ್ಷ ರಾಮನಾಥಪುರದ ಶ್ರೀನಿವಾಸ, ಜಿಲ್ಲಾ ಸಂಘಟನೆ ಕಾರ್ಯದರ್ಶಿ ಬೇಲೂರು ಚಂದನ ಕುಮಾರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

# ಬನ್ನಿ ಮಕ್ಕಳೇ ಶಾಲೆಗೆ, ನಿಮಗಿದೋ ಸ್ವಾಗತ

ಶಾಲೆಯೇ ದೇವಾಲಯ. ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ. ಶಾಲೆಯು ಆರಂಭವಾಗುತ್ತಿದೆ. ಬನ್ನಿ ಮಕ್ಕಳೇ ನಿಮ್ಮನ್ನು ಸ್ವಾಗತಿಸಲು ಕಾದಿರುವರು ಗುರುಗಳು. ಮತ್ತೊಮ್ಮೆ ನಿಮ್ಮೆಲ್ಲ ಗೆಳೆಯರೊಂದಿಗೆ ಸೇರಿ ಸಂತಸ ಹಂಚಿಕೊಳ್ಳಿರಿ. ನಿಮ್ಮ ಹಿಂದಿನ ತರಗತಿಯ ಕಹಿ ನೆನಪುಗಳನ್ನು ಮರೆತು ಸವಿ ಸವಿ ನೆನಪುಗಳೊಂದಿಗೆ ಮುಂದಿನ ತರಗತಿಯೊಳಗೆ ಕುಳಿತುಕೊಳ್ಳಿ. ಶಾಲಾ ಪ್ರಾರಂಭೋತ್ಸವದ ಮೊದಲ ದಿನವಿದು. ಮನಸ್ಸು ಬದಲಾವಣೆಯ ಸಮಯವನ್ನು ಅನುಭವಿಸುತ್ತದೆ. ತಳಿರು- ತೋರಣಗಳಿಂದ ಅಲಂಕೃತಗೊಂಡಿರುವ ಶಾಲಾ ಸ್ವಚ್ಛ ಪರಿಸರ, ಗುರುಗಳ ಪ್ರೀತಿಯ ಹಿತವಾದ ಮಾತುಗಳು, ಮಕ್ಕಳ ಮನಸ್ಸಿಗೆ ಮುದ ನೀಡುತ್ತದೆ. ಶಾಲೆಯ ಪರಿಸರ ಮಗುವಿನ ಜೀವನದಲ್ಲಿ ಪರಿಣಾಮಕಾರಿ ಮತ್ತು ವೈಶಿಷ್ಟ್ಯ ಪೂರ್ಣ ಅನುಭವವನ್ನು ನೀಡುತ್ತವೆ.

ಹೊಸ ಗೆಳೆಯರ ಬಳಗ ಪ್ರಾರಂಭವಾಗುತ್ತದೆ. ಜೊತೆ ಜೊತೆಯಲ್ಲಿ ಶಿಸ್ತು ಬೆಳಸಿಕೊಳ್ಳಲು ಮಗು ಅಣಿಯಾಗುತ್ತದೆ. ಕಲಿಕೆಗೆ ತನ್ನನ್ನು ಹೊಂದಿಸಿಕೊಳ್ಳುತ್ತದೆ. ಹೊಸ ಪಠ್ಯ ಪುಸ್ತಕಗಳೊಂದಿಗೆ ಹೊಸ ವಿಚಾರಗಳನ್ನು ಕಲಿಯಲು ತಾನು ಸಿದ್ಧವಾಗುತ್ತದೆ. ಸಮವಸ್ತ್ರವನ್ನು ಧರಿಸುವ ಮೂಲಕ ಸಮಾನತೆ, ಸಹಬಾಳ್ವೆಯ ಸಮನ್ವಯತೆಯನ್ನು ಹಾಗೂ ಸಹೋದರತೆಯನ್ನು ಕಲಿತುಕೊಳ್ಳುತ್ತದೆ. ಇಷ್ಟೆಲ್ಲಾ ಕಲಿಯುವ ಮಗುವಿನ ಆಸಕ್ತಿಗೆ ಧನ್ಯವಾದಗಳು. ಬೆಳೆಯುವ ಸಸಿಗೆ ಪೋಷಕರು ಪಾಲಕರು ಮತ್ತು ಗುರುವೃಂದವು ಸೂಕ್ತ ಮಾರ್ಗದರ್ಶನ ಮತ್ತು ವಿದ್ಯೆಯನ್ನು ನೀಡಬೇಕಾಗುತ್ತದೆ. ಹಾಗಾದರೆ ವಿದ್ಯೆ ಎಂದರೇನು? ವಿದ್ಯೆಯನ್ನು ನೀಡುವವರು ಯಾರು? ವಿದ್ಯೆಯನ್ನು ಪಡೆಯುವವರು ಯಾರು? ವಿದ್ಯಾರ್ಥಿ ಯಾರು? ವಿದ್ಯಾರ್ಜನೆ ಹೇಗಿರುತ್ತದೆ? ವಿದ್ಯಾರ್ಜನೆಯ ಮೂಲಕ ಪಡೆದ ಜ್ಞಾನಾರ್ಜನೆಯು ಪ್ರಸ್ತುತ ಸಮಾಜಕ್ಕೆ ಹೊಂದಾಣಿಕೆ ಆಗುತ್ತದೆಯೇ? ಎಂಬೆಲ್ಲ ಪ್ರಶ್ನೆಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಮೊದಲು ವಿದ್ಯೆಯ ಬಗ್ಗೆ ತಿಳಿಯುತ್ತಾ ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಕಂಡುಕೊಳ್ಳೋಣ.

ವಿದ್ಯೆ ಒಂದು ಸಂಸ್ಕಾರ. ಈ ಸಂಸ್ಕಾರವು ನಮಗೆ ಗುರುವಿನ ಮೂಲಕ ದೊರೆಯುತ್ತದೆ. ನಾವು ತಿಳಿದಿರುವಂತೆ ವಿದ್ಯೆ ಯಾರೊಬ್ಬರೂ ಕದಿಯಲಾಗದ ಆಸ್ತಿ. ನಮ್ಮೊಳಗಿನ ಆತ್ಮದ ಅಸ್ತಿತ್ವ ಇರುವವರೆಗೂ ವಿದ್ಯೆ ಶಾಶ್ವತವಾಗಿರುತ್ತದೆ. ವಿದ್ಯೆಯನ್ನು ನಾವು ಯಾರೊಬ್ಬರ ಸಹಾಯವಿಲ್ಲದೆ ಪಡೆಯುವುದು ಅಸಾಧ್ಯ. ತಂದೆ-ತಾಯಿಯ ವಾತ್ಸಲ್ಯಯುತ ತ್ಯಾಗ, ಗುರುವಿನ ಕಠಿಣ ಪರಿಶ್ರಮ, ನಮ್ಮ ವಿದ್ಯೆಯಲ್ಲಿ ಇರುತ್ತದೆ. ನಮ್ಮ ಜ್ಞಾನದ ಮಟ್ಟ ಎಷ್ಟೆಷ್ಟಿದೆಯೋ ಅಷ್ಟಷ್ಟು ವಿದ್ಯೆಯನ್ನು ನಾವು ಅರ್ಜಿಸುತ್ತೇವೆ. ಒಂದು ವೇಳೆ ನಮ್ಮ ಜ್ಞಾನದ ಮಟ್ಟ ಹೆಚ್ಚಾಗಿದ್ದರೆ ಹೆಚ್ಚಿನ ವಿದ್ಯೆಯನ್ನೂ, ನಮ್ಮ ಜ್ಞಾನದ ಮಟ್ಟ ಕಡಿಮೆ ಇದ್ದರೆ ಕಡಿಮೆ ಜ್ಞಾನವನ್ನೂ ಪಡೆಯುತ್ತೇವೆ.

ಇದು ಪ್ರತಿಯೊಬ್ಬರಲ್ಲೂ ಭಿನ್ನತೆಯಿಂದ ಕೂಡಿರುತ್ತದೆ. ಶಾಲೆ, ಕಾಲೇಜು, ವಿಶ್ವವಿದ್ಯಾಲಯ ಮತ್ತು ಗುರುಕುಲ ಅವುಗಳನ್ನು ಬಿಟ್ಟ ಮೇಲೂ ನಮ್ಮಲ್ಲಿ ಉಳಿಯುವ ನಿಜವಾದ ಆಸ್ತಿ ಎಂದರೆ ಅದು ಜ್ಞಾನದಿಂದ ಅರ್ಜಿಸಿದ ವಿದ್ಯೆ ಮಾತ್ರ. ಈ ಜ್ಞಾನದ



ವಿದ್ಯೆಯು ಒಮ್ಮೆಲೆ ಏಕಾಏಕಿ ಹರಿದು ಬರುವುದಿಲ್ಲ. ಅದು ಹನಿ, ಹನಿಯಾಗಿ ಹರಿದು ಬರುತ್ತದೆ ಮತ್ತು ಹಾಗೆಯೇ ಬರಬೇಕು. ಆಗ ಮಾತ್ರ ಜ್ಞಾನದ ವಿದ್ಯೆ ಶಾಶ್ವತತೆಯನ್ನು ಪಡೆಯುತ್ತದೆ. ಅಂತಹ ಜ್ಞಾನದ ವಿದ್ಯೆ ನಮ್ಮಲ್ಲಿ ಆತ್ಮವಿಶ್ವಾಸ, ಪರೋಪಕಾರ, ಸ್ವಾವಲಂಬನೆ, ಪರಿಶ್ರಮ, ಧೈರ್ಯ, ಸಹನೆ, ಸಹಾಯ, ಯೋಗ್ಯತೆ ಮತ್ತು ಉತ್ತಮ ಚಿಂತನೆಗಳನ್ನು ಮೂಡಿಸುತ್ತದೆ.

ವಿದ್ಯೆಯನ್ನು ಕಲಿಯುವವರು ವಿದ್ಯಾರ್ಥಿ ಎನಿಸಿಕೊಂಡರೆ ವಿದ್ಯೆಯನ್ನು ಕಲಿಸುವವರು ಗುರು ಎನಿಸಿಕೊಳ್ಳುತ್ತಾರೆ. ವಿದ್ಯೆಯನ್ನು ಕಲಿಯಲು ಪ್ರೋತ್ಸಾಹಿಸುವವರು ಪ್ರೋತ್ಸಾಹಕ ವರ್ಗಕ್ಕೆ ಸೇರುತ್ತಾರೆ. ವಿದ್ಯೆಯನ್ನು ಕಲಿಯಲು ಅನುಕೂಲಿಸುವವರು ಸುಗಮಕಾರರು ಎಂದೆನಿಸಿಕೊಳ್ಳುತ್ತಾರೆ. ಸದಾ ನಮಗೆ ಬೆಳಕನ್ನು ನೀಡುವ ಮೂಲಕ ವಿದ್ಯಾರ್ಥಿಗಳ ಜ್ಞಾನದ ಮಟ್ಟವನ್ನು ಹೆಚ್ಚಿಸುತ್ತಾರೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಮಾತಿನಂತೆ ವಿದ್ಯಾರ್ಥಿಗಳಿಗೆ ನಾಡು- ನುಡಿ, ನೆಲ- ಜಲ, ಸಂಸ್ಕೃತಿ, ಆಚಾರ- ವಿಚಾರ, ನೀತಿ-ನಿಯಮ, ರೀತಿ- ರಿವಾಜು, ಕಾನೂನು- ಕಟ್ಟಳೆ, ಸಹಕಾರ- ಹೊಂದಾಣಿಕೆ, ಸಹನೆ-ಸಹಬಾಳ್ವೆ, ಪ್ರೀತಿ-ವಿಶ್ವಾಸ, ನಂಬಿಕೆ-ತ್ಯಾಗ, ಹೆಣ್ಣಿನ ಬಗ್ಗೆ ಗೌರವ, ಗುರು ಹಿರಿಯರಲ್ಲಿ ಭಕ್ತಿಭಾವ, ನಾವು ನಮ್ಮವರು ಎಂಬ ಭಾವನೆ ಈ ರೀತಿಯ ಮನೋಭಾವವನ್ನು ವೃದ್ಧಿಸಿ ಉತ್ತಮ ಶಿಷ್ಟಾಚಾರವನ್ನು ಕಲಿಸುವುದು. ನಮ್ಮ ದೇಶದ ಇತಿಹಾಸ ಪರಂಪರೆಗಳನ್ನು ಗೌರವಿಸುವಂತೆ ಗುರುದರ್ಶನ ಮಾಡಿಸುವುದು, ಗುರುವಿನ ಮತ್ತು ಶಾಲೆಯ ಕರ್ತವ್ಯವಾಗಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ವಿದ್ಯಾರ್ಥಿಯ ಶ್ರಮವು ಬಹಳ ಅಗತ್ಯವಿರುತ್ತದೆ.

ನಾವು ಹೊಂದುವ ವಿದ್ಯೆ ಮತ್ತು ಜ್ಞಾನ ಎರಡು ಪರಸ್ಪರಾವಲಂಬಿತವಾಗಿರುತ್ತವೆ. ವಿದ್ಯೆಯ ಬಗ್ಗೆ ತಿಳಿದ ನಾವು ಈಗ ಜ್ಞಾನದ ಬಗ್ಗೆಯೂ ತಿಳಿಯೋಣ. ಜ್ಞಾನವು ಅಂಧಕಾರವನ್ನು ಹೊಡೆದೋಡಿಸುವ ಸರ್ವಶ್ರೇಷ್ಠ ಸಾಧನವಾಗಿದೆ. ಆದ್ದರಿಂದಲೇ ಜ್ಞಾನವನ್ನು ಬೆಳಕು ಎಂಬ ಅರ್ಥದಲ್ಲಿ ಪರಿಕಲ್ಪಿಸಲಾಗಿದೆ. ಜ್ಞಾನಾರ್ಜನೆಯು ವಿದ್ಯಾರ್ಜನೆಯ ಮೂಲಕ ಲಭ್ಯವಾಗುವುದರಿಂದ ವಿದ್ಯಾರ್ಥಿಯ ಬದುಕಿನಲ್ಲಿ ಗುರು ಸರ್ವಶ್ರೇಷ್ಠ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಗುರುವಿನ ಮೂಲಕ ಕಲಿತ ವಿದ್ಯೆ, ಬುದ್ಧಿ, ಜ್ಞಾನವು ಅನಂತಕಾಲದವರೆಗೂ ಇದ್ದು ಶಾಶ್ವತತೆಯ ಸ್ಥಾನವನ್ನು ಪಡೆಯುತ್ತದೆ. ಜ್ಞಾನಾರ್ಜನೆ ಮಾಡಿಕೊಂಡವನನ್ನು ಜ್ಞಾನಿ ಎಂದು ಕರೆಯಲಾಗುತ್ತದೆ. ವಿದ್ಯಾರ್ಜನೆ ಮಾಡಿಕೊಂಡವರನ್ನು ವಿದ್ಯಾರ್ಥಿ ಎಂದು ಕರೆಯಲಾಗುತ್ತದೆ.

ನಿಜವಾದ ಜ್ಞಾನಿಯು ಸ್ಥಿತಪ್ರಜ್ಞತೆಯನ್ನು ಹೊಂದಿದ್ದು ಕಾಲಕಾಲದಲ್ಲಿ ತನಗಾಗುವ ಸನ್ಮಾನ ಅವಮಾನಗಳಿಗೆ ವಿಚಲಿತಲಗುವುದಿಲ್ಲ. ತುಂಬಿದ ಕೊಡದಂತಿರುತ್ತಾನೆ. ಜ್ಞಾನವನ್ನು ಮಾಹಿತಿಗಳ ಸಂಗ್ರಹಣೆಯ ಮೂಲಕ ಪಡೆಯುವುದು ಅಷ್ಟೇ ಅಲ್ಲದೆ ಅದನ್ನು ಸರಿಯಾದ ಕ್ರಮದಲ್ಲಿ ಮತ್ತು ಸರಿಯಾದ ಸಮಯಕ್ಕೆ ಬಳಸುವುದು ಸಹ ಜ್ಞಾನಾರ್ಜನೆಯ ಪ್ರಕ್ರಿಯೆಯಲ್ಲಿ ಒಂದಾಗಿದೆ. ವಿದ್ಯೆ ಮತ್ತು ಜ್ಞಾನವು ಬುದ್ಧಿಯ ಬೆಳವಣಿಗೆಗೆ ಇಂಬು ಕೊಡುತ್ತದೆ. ವಿದ್ಯಾರ್ಥಿಗೆ ಸ್ವಂತ ಬದುಕನ್ನು ಕಟ್ಟಿಕೊಳ್ಳುವಂತೆ ಪ್ರಭಾವಿಯುತ ಪ್ರೇರಣೆ ನೀಡುವುದು. ವಿದ್ಯೆ ಮತ್ತು ಜ್ಞಾನವನ್ನು ಪಡೆಯುವ ಮೂಲ ಉದ್ದೇಶವೇ ವಿದ್ಯಾರ್ಥಿಯು ಸ್ವಯಂ ತಾನೆ ತನ್ನ ಬದುಕನ್ನು ರೂಪಿಸಿಕೊಳ್ಳುವುದು. ಸ್ವಂತ ದುಡಿಮೆ ಮಾಡಿ, ದೇಶದ ಪ್ರಜ್ಞಾವಂತ ಪ್ರಜೆಯಾಗಿ ಹೊರಹೊಮ್ಮುವಂತೆ ಮಾಡುವುದು.

ಗುರುದರ್ಶನದಲ್ಲಿ ಅಂತಹ ಉತ್ತಮ ಪ್ರಭಾವ ಬೀರುವ ಮಾರ್ಗದರ್ಶನದ ಮೂಲಕ ಉತ್ತಮ ಪ್ರೇರಣೆ ನೀಡುವುದು. ವಿದ್ಯಾರ್ಥಿಗಳು ತಮ್ಮ ಗುರುವಿನಿಂದ ತಾವು ಗಳಿಸಿದ ವಿದ್ಯೆ ಮತ್ತು ಜ್ಞಾನವನ್ನು ಪ್ರಾಯೋಗಿಕ ಜೀವನ ವಿಧಾನಕ್ಕೆ ಅನ್ವಯಿಸುವುದು. ಇಂದಿನ ಗುರುಗಳು 21ನೇ ಶತಮಾನದ ಸ್ಪರ್ಧಾತ್ಮಕ ಯುಗವನ್ನು ಗೆದ್ದು ಜೀವನ ಸಾಗಿಸಲು ಅನುಕೂಲವಾಗುವಂತೆ ವಿದ್ಯೆ ಮತ್ತು ಜ್ಞಾನವನ್ನು ವಿದ್ಯಾರ್ಥಿಗೆ ಅನುಕೂಲಿಸುವುದು.

ನಾವು ಪಡೆಯುವ ವಿದ್ಯೆ ಮತ್ತು ಜ್ಞಾನವು ನಮ್ಮ ಮೌಢ್ಯತೆಯನ್ನು ತೊಲಗಿಸುವುದು. ವಿದ್ಯಾರ್ಥಿಗಳು ಸಮಾಜದ ವಿವಿಧ ಸ್ತರಗಳಿಂದ ಶಾಲೆಗೆ ಬರುವವರಾಗಿರುತ್ತಾರೆ. ವಿಭಿನ್ನ ಕೌಟುಂಬಿಕ ಜೀವನದ ಹಿನ್ನೆಲೆಯುಳ್ಳ ವಿದ್ಯಾರ್ಥಿಗಳು ಶಾಲೆಗೆ ಬರುವವರಾಗಿರುತ್ತಾರೆ. ಇಂತಹ ಹಲವು ವಿದ್ಯಾರ್ಥಿಗಳು ಪೂರ್ವಾಗ್ರಹ ಪೀಡಿತರಾಗಿ, ಅಂಧಾನುಕರಣೆ, ಮೌಢ್ಯದ ಆಚರಣೆ ಮಾಡುವ ಮನೋಭಾವದವರು ಆಗಿರಬಹುದು. ಇಂತಹ ವಿದ್ಯಾರ್ಥಿಗಳಲ್ಲಿ ವೈಚಾರಿಕ, ವೈಜ್ಞಾನಿಕ, ತಾರ್ಕಿಕ ಮನೋಭಾವ ಮೂಡಿಸುವುದು ಗುರುವಿನ ಮತ್ತು ವಿದ್ಯೆಯ ಮಹತ್ತರ ಕರ್ತವ್ಯವಾಗಿದೆ.

ವಿದ್ಯೆ ಮತ್ತು ಜ್ಞಾನವು ವಿದ್ಯಾರ್ಥಿಯನ್ನು ಸಮಾಜದ ಪ್ರಜ್ಞಾವಂತ ಪ್ರಜೆಯನ್ನಾಗಿ ರೂಪಿಸುತ್ತದೆ. ಈ ರೀತಿ ಪಡೆದ ಜ್ಞಾನದ ಮಹೋನ್ನತ ವಿದ್ಯೆಯು ಜನಹಿತಕ್ಕಾಗಿ ಸದ್ಬಳಕೆಯಾದರೆ ಮಾತ್ರ ವಿದ್ಯೆ ಮತ್ತು ಜ್ಞಾನವನ್ನು ಪಡೆದ ವ್ಯಕ್ತಿಯ ಬದುಕು ಸಾರ್ಥಕವಾಗುತ್ತದೆ. ಪ್ರೀತಿಯ ಮಕ್ಕಳೆ ಎಂದಿಗೂ, ಯಾವುದೇ ಕಾರಣದಿಂದಲೂ ಶಾಲೆಯನ್ನು ಮಾತ್ರ ಬಿಡಬೇಡಿ. ಅನಕ್ಷರತೆಯ ಅಳಿವಿಗೆ ಸಾಕ್ಷರತೆಯ ಉಳಿವಿಗೆ ವಿದ್ಯೆ ಮತ್ತು ಜ್ಞಾನ ಎರಡೂ ದಾರಿದೀವಿಗೆಯಾಗಿವೆ. ನಮ್ಮ ಜ್ಞಾನದ ವಿದ್ಯೆಯನ್ನು ಸದ್ಬಳಕೆ ಮಾಡೋಣ. ಸಮಾಜದ ಮತ್ತು ರಾಷ್ಟ್ರದ ಏಳಿಗೆಗೆ ಸಮರ್ಪಿಸೋಣ. ಆಗ ಮಾತ್ರ ಸ್ಟೂಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್ ಎಂಬ ಮಾತು ನಿಜವಾಗುತ್ತದೆ.

– ಕೆ.ಎನ್.ಚಿದಾನಂದ, ಹಾಸನ.

CMYK CMYK CMYK CMYK

# ಸಿದ್ದರಾಮಯ್ಯ ನಿಜವಾದ ಜನನಾಯಕ : ಜೈರಾಮ್ ರಮೇಶ್ ಶ್ಲಾಘನೆ

• ಪ್ರಜೋದಯ ವರದಿ

**ನವದೆಹಲಿ :** ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಪ್ರಭಾವಶಾಲಿ ನಾಯಕರಲ್ಲಿ ಒಬ್ಬರಾಗಿದ್ದಾರೆಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಶುಕ್ರವಾರ ಶ್ಲಾಘಿಸಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಅವರು ಪೋಸ್ಟ್ ಮಾಡಿದ್ದು, ಅವರ ಆಡಳಿತಾತ್ಮಕ ಚತುರತೆ, ಸಾಮಾಜಿಕ ನ್ಯಾಯಕ್ಕೆ ಬದ್ಧತೆ ಮತ್ತು ನಾಲ್ಕು ದಶಕಗಳ ರಾಜಕೀಯ ಜೀವನದಲ್ಲಿ ಗೌರವಯುತವಾಗಿ ಪದತ್ಯಾಗ ಮಾಡಿದ್ದಾರೆ. ಸಿದ್ದರಾಮಯ್ಯ ಅವರ ನಾಲ್ಕು ದಶಕಗಳ ರಾಜಕೀಯ ಜೀವನ ಮತ್ತು 17 ಬಾರಿ ಬಜೆಟ್ ಮಂಡನೆಯು ಅವರ ವರ್ಚಸ್ಸು ಮತ್ತು ಕರ್ನಾಟಕದ ಆಡಳಿತಕ್ಕೆ ಅವರ ಕೊಡುಗೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ತಮ್ಮ ರಾಜಕೀಯ ಜೀವನದುದ್ದಕ್ಕೂ ಸಾಮಾಜಿಕ ನ್ಯಾಯ, ಜಾತ್ಯಾತೀತತೆ ಮತ್ತು ವೈಜ್ಞಾನಿಕ ಮನೋಭಾವವನ್ನು ಪ್ರತಿಪಾದಿಸಿದ್ದಕ್ಕಾಗಿ 2013-2018 ಮತ್ತು 2023-2026 ರವರೆಗೆ ಎರಡು ಪ್ರತ್ಯೇಕ ಅವಧಿಗಳಲ್ಲಿ 8 ವರ್ಷಗಳಿಗೂ ಹೆಚ್ಚು ಕಾಲದ ವೃತ್ತಿ ಜೀವನದೊಂದಿಗೆ ಸಿದ್ದರಾಮಯ್ಯ ಅವರು ರಾಜ್ಯದ ಅತ್ಯಂತ ದೀರ್ಘಾವಧಿಯ ಮುಖ್ಯಮಂತ್ರಿಯಾಗಿದ್ದಾರೆ.

ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕದ ರಾಜಕೀಯದಲ್ಲಿ ಸಿದ್ದರಾಮಯ್ಯ ಅವರು ಅತ್ಯಂತ ಪ್ರಭಾವಶಾಲಿ ವ್ಯಕ್ತಿಯಾಗಿದ್ದಾರೆ. ಇದು ಸ್ವತಃ ಒಂದು ಅದ್ಭುತ ಸಾಧನೆಯಾಗಿದೆ. ಅವರು ರಾಜ್ಯದಲ್ಲಿ 17 ಬಜೆಟ್‌ಗಳನ್ನು ಮಂಡಿಸಿದ್ದಾರೆ, ಗುಜರಾತ್‌ನಲ್ಲಿ ವಜುಭಾಯಿ ವಾಲಾ ಅವರ ಹೆಸರಿನಲ್ಲಿರುವ ದಾಖಲೆಗಿಂತ ಕೇವಲ ಒಂದು ಕಡಿಮೆ ಮತ್ತು ಪಶ್ಚಿಮ ಬಂಗಾಳದಲ್ಲಿ ಡಾ. ಅಸಿಮ್ ದಾಸ್‌ಗುಪ್ತ ಅವರ ದಾಖಲೆಗಿಂತ ಒಂದು ಹೆಚ್ಚಾಗಿದೆ.

ಸಿದ್ದರಾಮಯ್ಯ ಅವರ 17 ಬಜೆಟ್‌ಗಳಲ್ಲಿ ಪ್ರತಿಯೊಂದೂ ಗಮನಾರ್ಹ ಮತ್ತು ಪ್ರಭಾವಶಾಲಿಯಾಗಿತ್ತು. ಬಜೆಟ್ ರಚನೆ ಮತ್ತು ಆಡಳಿತದ ಮೇಲಿನ ಅವರ ಪಾಂಡಿತ್ಯದ ಹೊರತಾಗಿ, ಸಿದ್ದರಾಮಯ್ಯ ಅವರು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಪ್ರಬಲ ಪ್ರತಿಪಾದಕರಾಗಿದ್ದಾರೆ. ಜಾತ್ಯಾತೀತ ಮೌಲ್ಯಗಳಿಗೆ ರಾಜಿಯಾಗದ ಪ್ರತಿಪಾದಕ ಮತ್ತು ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವದ ಬಲವಾದ ಧ್ವನಿಯಾಗಿದ್ದಾರೆಂದು ಜೈರಾಮ್ ರಮೇಶ್ ಹೇಳಿದ್ದಾರೆ.

ಸಿದ್ದರಾಮಯ್ಯ ಅವರ ರಾಜಕೀಯ ಶೈಲಿ ಮತ್ತು ತೀಕ್ಷ್ಣವಾದ ಭಾಷಣಗಳು ಕರ್ನಾಟಕ ರಾಜಕೀಯದ ಮೇಲೆ ಶಾಶ್ವತವಾದ ಪ್ರಭಾವ ಬೀರಿವೆ. ರಾಜೀನಾಮೆ ನೀಡುವ ಸಮಯದಲ್ಲಿ ಸಿದ್ದರಾಮಯ್ಯ ಅವರ ನಡವಳಿಕೆ ಘನತೆಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಪೂರ್ಣ ಮತ್ತು ಅತ್ಯುತ್ತಮ ಅರ್ಥದಲ್ಲಿ ನಿಜವಾದ ಜನನಾಯಕರಾಗಿದ್ದಾರೆ. ಮಾತಿನಲ್ಲಿ ನಿರರ್ಗಳತೆ, ರಾಜಕೀಯ ವಿರೋಧಿಗಳನ್ನು ಮಟ್ಟಹಾಕುವ ವಾಕ್ಚಾತುರ್ಯ ಯಾವಾಗಲೂ ಪರಿಣಾಮಕಾರಿ ಯಾಗಿತ್ತು. ಕರ್ನಾಟಕದ ಅಭಿವೃದ್ಧಿಗೆ ಅವರ ವೈವಿಧ್ಯಮಯ ಕೊಡುಗೆಗಳು ಶಾಶ್ವತವಾಗಿರುತ್ತವೆ. ರಾಜೀನಾಮೆ ನೀಡುವಾಗ ಅವರು ನಡೆದುಕೊಂಡ ರೀತಿ ಅವರ ಘನತೆಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ರಮೇಶ್ ಬರೆದುಕೊಂಡಿದ್ದಾರೆ.

ನಾಳೆ ನಡೆಯುವ ಪಕ್ಷದ ಶಾಸಕಾಂಗ ಸಭೆಯಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ನಾಯಕನಾಗಿ ಆಯ್ಕೆ ಮಾಡಲಾಗುವುದೆಂದು ಶಾಸಕ ಅಶೋಕ್ ಪಟ್ಟಣ್ ತಿಳಿಸಿದ್ದಾರೆ. ಇದಕ್ಕೂ ಮುನ್ನಾ ಹಿರಿಯ ಕಾಂಗ್ರೆಸ್ ನಾಯಕ ವೀರಪ್ಪ ಮೊಯ್ಲಿ, ಸಿದ್ದರಾಮಯ್ಯ ಎರಡನೇ ಅವಧಿಗೆ ಮುಖ್ಯಮಂತ್ರಿ ಆಗುವಾಗಲೇ ಈ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸಿದ್ದರಾಮಯ್ಯ ಪರಿಣಾಮಕಾರಿಯಾಗಿ ತಮ್ಮ ಪಾತ್ರವನ್ನು ನಿರ್ವಹಿಸಿದ್ದು, ಕಾಂಗ್ರೆಸ್ ಸರ್ಕಾರಕ್ಕೆ ಯಾವುದೇ ತೊಂದರೆಯಾಗಲ್ಲ. ಸ್ಥಿರವಾಗಿರುತ್ತದೆ ಎಂದಿದ್ದಾರೆ.

# ಹಣಕ್ಕಾಗಿ ಪತ್ನಿ ಕೊಲೆ : ಆಸ್ಪತ್ರೆ ಬಳಿ ಮೃತದೇಹ ಬಿಟ್ಟು ಪತಿ ಪರಾರಿ

• ಪ್ರಜೋದಯ ವರದಿ

**ಹಾಸನ:** ವರದಕ್ಷಿಣೆ ಹಣಕ್ಕಾಗಿ ಪತ್ನಿಯನ್ನು ಕೊಲೆ ಮಾಡಿ, ಮೃತದೇಹವನ್ನು ಆಸ್ಪತ್ರೆಗೆ ದಾಖಲಿಸಿ ಪತಿ ಪರಾರಿಯಾಗಿರುವ ಘಟನೆ ಚನ್ನರಾಯಪಟ್ಟಣದ ಕಂಚಾಗಾರ ಬೀದಿಯಲ್ಲಿ ನಡೆದಿದೆ. ಮಹಿಳೆ ಗುಲ್ಷನ್ ಬಾನು (34) ಕೊಲೆಯಾಗಿದ್ದು, ಆಕೆಯ ಪತಿ ಸೈಫ್‌ಅಲಿಖಾನ್ ಕೊಲೆ ಮಾಡಿದ್ದಾನೆ.





14 ವರ್ಷಗಳ ಹಿಂದೆ ಹಾಸನದ ಚಿಪ್ಪಿನಕಟ್ಟೆಯ ಗುಲ್ಷನ್‌ಬಾನು ಚನ್ನರಾಯಪಟ್ಟಣದ ಸೈಫ್ ಅಲಿಖಾನ್‌ನನ್ನು ವಿವಾಹವಾಗಿದ್ದರು. ದಂಪತಿಗೆ ಎರಡು ಗಂಡು ಮಕ್ಕಳಿದ್ದು, ಸೈಫ್‌ಅಲಿಖಾನ್ ಗಾರೆ ಕೆಲಸ ಮಾಡಿಕೊಂಡಿದ್ದ. ಮದುವೆ ಎರಡು ವರ್ಷ ದಂಪತಿ ಅನ್ಯೋನ್ಯವಾಗಿದ್ದರು. ನಂತರ ವರದಕ್ಷಿಣೆ ಹಣ ತರುವಂತೆ ಪತ್ನಿಗೆ ಕಿರುಕುಳ ನೀಡಿ, ಮನ ಬಂದಂತೆ ಹಲ್ಲೆ ಮಾಡುತ್ತಿದ್ದ. ಈ ಬಗ್ಗೆ ಚನ್ನರಾಯಪಟ್ಟಣ ಹಾಗು ಹಾಸನ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಸೈಫ್ ಅಲಿಖಾನ್ ಬದಲಾಗಿರಲಿಲ್ಲ. ಮೂರ್ನಾಲ್ಕು ಬಾರಿ ಕುಟುಂಬಸ್ಥರು ರಾಜಿ ಪಂಚಾಯಿತಿ ಮಾಡಿದ್ದರೂ ಹಣಕ್ಕಾಗಿ ಪೀಡಿಸುತ್ತಲೇ ಇದ್ದ.

ಅಳಿಯನಿಗೆ ಐವತ್ತು ಸಾವಿರ ಹಣ ಹಾಗು ಒಂದು ಆಟೋ ಕೊಡಿಸಿದ್ದರು. ಆದರೆ, ಕೆಲ ದಿನಗಳ ನಂತರ ಹಣಕ್ಕಾಗಿ ಆಟೋವನ್ನು ಮಾರಾಟ ಮಾಡಿದ್ದ. ಗುರುವಾರ ಬಕ್ರೀದ್ ಹಬ್ಬಕ್ಕೆ ಹಣವಿಲ್ಲವೆಂದು ಪತ್ನಿ ಜೊತೆ ಜಗಳ ತೆಗೆದು, ಹಲ್ಲೆ ನಡೆಸಿ ಹತ್ಯೆ ಮಾಡಿದ್ದಾನೆ. ನಂತರ ಆಸ್ಪತ್ರೆಗೆ ಆಟೋದಲ್ಲಿ ಕರೆದೊಯ್ದು ಅಲ್ಲಿಯೇ ಮೃತದೇಹ ಬಿಟ್ಟು ಪರಾರಿಯಾಗಿದ್ದಾನೆ. ಈ ಬಗ್ಗೆ ಚನ್ನರಾಯಪಟ್ಟಣ ನಗರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದ್ದು, ಆರೋಪಿ ಯನ್ನು ಬಂಧಿಸಿಲ್ಲವೆಂದು ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆದಿದ್ದು, ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆಸಿದ್ದಾರೆ.

# ಏಷ್ಯನ್ ಗೇಮ್ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಲು ವಿನೇಶ್‌ಗೆ ಸುಪ್ರೀಂ ಅವಕಾಶ



• ಪ್ರಜೋದಯ ವರದಿ

**ನವದೆಹಲಿ :** ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್ ನಲ್ಲಿ ಭಾಗವಹಿಸಲು ಕುಸ್ತಿಪಟು ವಿನೇಶ್ ಫೋಗಟ್ ಅವರಿಗೆ ಅವಕಾಶ ಕಲ್ಪಿಸಿರುವ ಸುಪ್ರೀಂ ಕೋರ್ಟ್, ದೆಹಲಿ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ನಿರಾಕರಿಸಿದೆ.

ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್ ರಾಷ್ಟ್ರ ರಾಜಧಾನಿಯಲ್ಲಿ ಮೇ 30, 31ರಂದು (ಶನಿವಾರ, ಭಾನುವಾರ) ನಡೆಯಲಿದೆ. ಟ್ರಯಲ್ಸ್‌ನಲ್ಲಿ ಭಾಗವಹಿಸಲು ವಿನೇಶ್ ಅವರಿಗೆ ಅವಕಾಶ ಕಲ್ಪಿಸಿ ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠವು ಮೇ 22ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ, ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಪಿ.ಎಸ್. ನರಸಿಂಹ ಮತ್ತು ನ್ಯಾ. ಅಲೋಕ್ ಅರಾಧೆ ಅವರಿದ್ದ ಪೀಠವು, ಆದೇಶಕ್ಕೆ ತಡೆ ನೀಡಲು ನಿರಾಕರಿಸಿದೆ. ಆದಾಗ್ಯೂ, ದೆಹಲಿ ಹೈಕೋರ್ಟ್ ಅನುಸರಿಸಿರುವ ವಿಧಾನದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದೆ.

ನಾವು ನಿಮ್ಮನ್ನು ತಡೆಯುತ್ತಿಲ್ಲ. ಟ್ರಯಲ್ಸ್‌ನಲ್ಲಿ ನೀವು ಭಾಗವಹಿಸಬಹುದೆಂದು ನ್ಯಾ. ನರಸಿಂಹ ಅವರು ವಿನೇಶ್ ಪರ ಹಾಜರಿದ್ದ ಹಿರಿಯ ವಕೀಲ ಮಾಧವಿ ದಿವಾನ್ ಅವರಿಗೆ ಹೇಳಿದ್ದಾರೆ. 2024ರ ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದಲ್ಲಿ 50 ಕೆ.ಜಿ. ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಫೈನಲ್ ತಲುಪಿದ್ದ ವಿನೇಶ್, ನಿಗದಿಗಿಂತ ಕೇವಲ 100 ಗ್ರಾಂ ಅಧಿಕ ತೂಕವಿದ್ದ ಕಾರಣ ಅನರ್ಹಗೊಂಡಿದ್ದರು. ಜಂಟಿ ಬೆಳ್ಳಿ ಪದಕ ಕೋರಿ ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿರಲಿಲ್ಲ. ಬಳಿಕ ಕುಸ್ತಿಗೆ ವಿದಾಯ ಹೇಳಿ ರಾಜಕೀಯ ಪ್ರವೇಶಿಸಿದ್ದರು. ಹರಿಯಾಣದ ಜುಲಾನ ವಿಧಾನಸಭಾ ಕ್ಷೇತ್ರದ ಶಾಸಕಿಯಾಗಿ ಆಯ್ಕೆಯಾಗಿದ್ದಾರೆ. ನಿವೃತ್ತಿ ತ್ಯಜಿಸಿ ಸಕ್ರಿಯ ಕ್ರೀಡೆಗೆ ಮರಳುವ ಕ್ರೀಡಾಪಟು, ವಾಡಾ ಮತ್ತು ವಿಶ್ವ ಕುಸ್ತಿ ಸಂಸ್ಥೆಯ (ಯುಡಬ್ಲ್ಯುಡಬ್ಲ್ಯು) ಉದ್ದೀಪನ ಮದ್ದುಸೇವನೆ ನಿಗ್ರಹ ನಿಯಮಗಳ ಪ್ರಕಾರ ಆರು ತಿಂಗಳು ಕಡ್ಡಾಯ ಅವಧಿಯಲ್ಲಿ ವೇರಬೌಟ್ಸ್ (ತಮ್ಮ ವಾಸ್ತವ್ಯಸ್ಥಳ) ಮತ್ತು ಡೋಪಿಂಗ್ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ಡಬ್ಲ್ಯುಎಫ್‌ಐ ವಾದಿಸಿತ್ತು.

# ಜನ ಸ್ನೇಹಿ ಕೆಲಸ ಮಾಡಲು ಅಧಿಕಾರಿಗಳಿಗೆ ಸೂಚನೆ

» ಮೊದಲನೇ ಪುಟದಿಂದ

ತಾಲ್ಲೂಕಿನ ಕೊಣನೂರು ಗ್ರಾಮ ಪಂಚಾಯಿತಿ ವತಿಯಿಂದ ಅಧ್ಯಕ್ಷ, ಪಿಡಿಒ ಸೇರಿಕೊಂಡು ಸರ್ಕಾರದ ಆಸ್ತಿಯನ್ನು ಹೆಚ್ಚುವರಿಯಾಗಿ ಖಾತೆ ಮಾಡಿಕೊಡಲಾಗಿದೆ. ಈ ಬಗ್ಗೆ ಕ್ರಮವಹಿಸುವಂತೆ ಸೂಚನೆ ನೀಡಿದ್ದರೂ ಕೂಡ ಕ್ರಮವಹಿಸಿಲ್ಲ ಎಂದು ತಾಲ್ಲೂಕು ಪಂಚಾಯಿತಿ ಇಒ ಶ್ರೀನಿವಾಸ್ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ನೋಟಿಸ್ ನೀಡಲಾಗಿದೆ. ಒಂದುವಾರದಲ್ಲಿ ಸರಿಪಡಿಸಲಾಗುವುದೆಂದು ಶಾಸಕರಿಗೆ ಭರವಸೆ ನೀಡಿದರು.

**ಬಗರ್ ಹುಕುಂ ಸಾಗುವಳಿ ಚೀಟಿಗೆ ಹಣ ಕೊಡಬೇಡಿ:** ಅರಕಲಗೂಡು ವಿಧಾನಸಭಾ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿ ಉಳುಮೆ ಮಾಡಿಕೊಂಡು ನಮೂನೆ 53ರಲ್ಲಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಭೂಮಿ ಮಂಜೂರು ಮಾಡಿಕೊಡಲಾಗುವುದು. ಅದೇ ರೀತಿ ಮಲ್ಲಿಪಟ್ಟಣ ಹೋಬಳಿಯಲ್ಲಿಯೂ ಭೂಮಿ ದೊರೆಯಲಿದೆ. ಈ ಹಿಂದೆ ನಮೂನೆ 50ರಲ್ಲಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಹ ಎಸಿಯವರ ಮೂಲಕ ಪಡೆಯುವ ಕೆಲಸ ನಡೆಯುತ್ತಿದೆ. ನಮೂನೆ 57ರಲ್ಲಿ ಅರ್ಜಿ ಸಲ್ಲಿಸಿರುವವರಿಗೆ ಭೂಮಿ ನೀಡುವ ಅಧಿಕಾರ ನಮಗೆ ಇಲ್ಲ. ಅನುಭವದಲ್ಲಿರುವವರಿಗೆ ತೊಂದರೆ ಇಲ್ಲ. ನೀವು ಎಂದಿನಂತೆ ಉಳುಮೆ ಮಾಡಿಕೊಂಡು ಹೋಗಬಹುದು. ನಿಮ್ಮನ್ನು ಒಕ್ಕಲೆಬ್ಬಿಸುವುದಿಲ್ಲ. ಈ ಕೆಲಸಕ್ಕೆ ಅಧಿಕಾರಿಗಳು, ಮಧ್ಯವರ್ತಿಗಳು ಹಣಕ್ಕೆ ಬೇಡಿಕೆ ಇಟ್ಟರೇ ನನ್ನ ಗಮನಕ್ಕೆ ತನ್ನಿ, ಒಂದು ರೂಪಾಯಿ ಹಣವನ್ನು ನೀಡುವಂತ್ತಿಲ್ಲ ಎಂದು ತಿಳಿಸಿದರು.

ಸಭೆಯಲ್ಲಿ ತಹಶೀಲ್ದಾರ್ ಸೌಮ್ಯ, ಇಒ ಶ್ರೀನಿವಾಸ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರಕುಮಾರ್, ಸಿಡಿಪಿಒ ವೆಂಕಟೇಶ್, ಸರ್ವೇ ಇಲಾಖೆ ಅಧಿಕಾರಿ ಸುಂದರ್, ಸಮಾಜಕಲ್ಯಾಣ ಇಲಾಖೆಅಧಿಕಾರಿ ಮಂಜುನಾಥ್ ಇದ್ದರು.

# ನಾಳೆ ಸ್ವಾತಂತ್ರ್ಯದ ಓಟ ನಾಟಕ




• ಪ್ರಜೋದಯ ವರದಿ

**ಹಾಸನ:** ಖ್ಯಾತ ಸಾಹಿತಿ ಬೊಳುವಾರು ಮಹಮ್ಮದ್ ಕುಂಞ ಅವರ ಕಾದಂಬರಿ ಆಧಾರಿತ ಸ್ವಾತಂತ್ರ್ಯದ ಓಟ ನಾಟಕವನ್ನು ಮೇ 31ರಂದು ಸಂಜೆ 5.30ಕ್ಕೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಲಾಗುತ್ತಿದೆ ಎಂದು ರಂಗಕರ್ಮಿ ಚಲಂ ಹಾಡ್ಲಹಳ್ಳಿ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಆಶ್ರಯದಲ್ಲಿ ರಂಗಾಯಣ ಶಿವಮೊಗ್ಗಾ ತಂಡ ಈ ನಾಟಕವನ್ನು ಪ್ರಸ್ತುತ ಪಡಿಸುತ್ತಿದೆ. ಸಾಮಾಜಿಕ ಮೌಲ್ಯಗಳು, ಸ್ವಾತಂತ್ರ್ಯದ ಅರ್ಥ, ವ್ಯಕ್ತಿಯ ಅಂತರಂಗದ ಸಂಘರ್ಷಗಳು ಹಾಗು ಸಮಕಾಲೀನ ಬದುಕಿನ ವೈವಿಧ್ಯಮಯ ಆಯಾಮಗಳನ್ನು ಒಳಗೊಂಡಿರುವ ಈ ನಾಟಕವು ಪ್ರೇಕ್ಷಕರ ಮನಸಿಗೆ ಹತ್ತಿರವಾಗುವಂತಿದೆ ಎಂದು ಹೇಳಿದರು.

ಹಿರಿಯ ರಂಗಕರ್ಮಿ ನಟರಾಜ್ ಹೊನ್ನವಳ್ಳಿ ರಂಗಪಠ್ಯ ವಿನ್ಯಾಸ ಹಾಗು ನಿರ್ದೇಶನ ಮಾಡಿದ್ದಾರೆ. ಮಂಜುನಾಥ್ ಗೋಮಾರದಹಳ್ಳಿ ಕಾದಂಬರಿಯನ್ನು ರಂಗರೂಪಕ್ಕೆ ತಂದಿದ್ದಾರೆ. ಸಲ್ಮಾ ದಂಡಿನ್ ಸಹ ನಿರ್ದೇಶನ ಜವಾಬ್ದಾರಿ ನಿರ್ವಹಿಸಿದ್ದು, ರಾಘವ ಕಮ್ಮಾರ ಸಂಗೀತ ಸಂಯೋಜನೆ ಮಾಡಿದ್ದಾರೆ. ರಂಗಸಜ್ಜಿಕೆಯನ್ನು ಮಧುಸೂಧನ್, ರಮೇಶ್ ಎಸ್.ಮೈಸೂರು, ಶಂಕರ್ ಕೆ.ಬೆಳಲಕಟ್ಟೆ ರಂಗಸಜ್ಜಿಗೆ ನಿರ್ಮಾಣ ಮಾಡಿದ್ದಾರೆ. ಸಹನಾ ಪಿಂಜರ್ ವಸ್ತ್ರವಿನ್ಯಾಸ ಮಾಡಿದ್ದು, ಪಾತ್ರಗಳಿಗೆ ಜೀವಂತಿಕೆ ನೀಡುವ ರೀತಿಯಲ್ಲಿ ವಿನ್ಯಾಸ ರೂಪಿಸಲಾಗಿದೆ ಎಂದರು.

ಒಟ್ಟು 1111 ಪುಟಗಳ ಕುಂಞ ಅವರ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಹ ಲಭಿಸಿದೆ. ವಲಸೆ ವಿಷಯವನ್ನು ನಾನಾ ಆಯಾಮಗಳಲ್ಲಿ ದಾಖಲಿಸಿದ್ದಾರೆ. 1949 ರಲ್ಲಿ ದೇಶ ವಿಭಜನೆಯಾದಾಗ ನೆಲಮಟ್ಟದ ಸಂಶೋಧನೆ ಮಾಡಿದ್ದಾರೆ. ಚಾಂದ್ ಅಲಿ ಎಂಬಾತ ಅನಿವಾರ್ಯವಾಗಿ ಭಾರತದ ಮುತ್ತಪ್ಪಾಡಿ ಎಂಬಲ್ಲಿ ನೆಲೆಸಿ ಕ್ರಮೇಣ ಭಾರತೀಯನೇ ಆಗುವುದನ್ನು ಕಟ್ಟಿಕೊಡಲಾಗಿದೆ ಎಂದರು.

ಸಾಹಿತಿ ಚಿನ್ನೇನಹಳ್ಳಿ ಸ್ವಾಮಿ ಮಾತನಾಡಿ, 35 ಮಂದಿ ಕಲಾವಿದರ ತಂಡ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಿದ್ದು, ಇದು ಸುಮಾರು ಮೂರೂವರೆ ಗಂಟೆಗಳ ನಾಟಕ ಭಾರತ-ಪಾಕ್ ವಿಭಜನೆ ನಂತರ ಏನೆಲ್ಲಾ ಆಯ್ತು ಎಂಬುದನ್ನು ನಾಟಕದಲ್ಲಿ ಕಟ್ಟಿಕೊಡಲಾಗಿದೆ. ಈ ನಾಟಕ ಎಲ್ಲರಿಗೂ ಮೆಚ್ಚುಗೆ ಆಗಲಿದೆ ಎಮದು ತಿಳಿಸಿದರು. ರಂಗಕರ್ಮಿ ಶಾಡ್ರಕ್, ರಂಗ ಕಲಾವಿದೆ, ನಟಿ ಪೂಜಾ ರಘುನಂದನ್ ಉಪಸ್ಥಿತರಿದ್ದರು.

# ಹೊಸ ಸರ್ಕಾರ ರಚನೆಗೆ ದೆಹಲಿಯಲ್ಲಿ ಕಸರತ್ತು

» ಮೊದಲನೇ ಪುಟದಿಂದ

ಸಂಪುಟ ಸೇರ್ಪಡೆ ಯಾಗುವ ಸಾಧ್ಯತೆ ಇದ್ದು, ರಾಮಲಿಂಗಾರೆಡ್ಡಿ, ಹೆಚ್.ಸಿ.ಮಹಾದೇವಪ್ಪ, ದಿನೇಶ್ ಗುಂಡೂರಾವ್, ಟಿ.ಬಿ.ಜಯಚಂದ್ರ, ಆರ್.ವಿ.ದೇಶಪಾಂಡೆ ಅವರ ಹೆಸರುಗಳು ಸಭಾಧ್ಯಕ್ಷ ಸ್ಥಾನಕ್ಕೆ ಕೇಳಿ ಬಂದಿವೆ. ನಾಲ್ಕು ಉಪ ಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿಗೆ ಸಿದ್ದರಾಮಯ್ಯ ಪಟ್ಟು ಹಿಡಿದಿದ್ದಾರೆ. ಆದರೆ ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿಗಳ ಹುದ್ದೆ ಬೇಡ ಎಂದು ಹಠ ಹಿಡಿದಿರುವುದಾಗಿ ತಿಳಿದು ಬಂದಿದೆ.

ಶುಕ್ರವಾರ ಮಧ್ಯಾಹ್ನದವರೆಗೂ ದೆಹಲಿಯಲ್ಲಿ ನಡೆದ ಹಗ್ಗಾ-ಜಗ್ಗಾಟ ಸಂಜೆಯ ವೇಳೆಗೆ ಒಂದು ಹಂತಕ್ಕೆ ಬಂದಿತು. ಸಿದ್ದರಾಮಯ್ಯ ಅವರು, ಹೈಕಮಾಂಡ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿ, ಕೃತಜ್ಞತೆ ಸಲ್ಲಿಸುವ ಜೊತೆಗೆ ತಮ್ಮ ಬೆಂಬಲಿಗರ ಹಿತರಕ್ಷಣೆ ಕುರಿತು ಮಹತ್ವದ ಚರ್ಚೆ ನಡೆಸಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ಸಂಪುಟ ರಚನೆಯ ಬಗ್ಗೆ ವರಿಷ್ಠ ನಾಯಕರೊಂದಿಗೆ ಚರ್ಚೆ ನಡೆಸುತ್ತಿದ್ದಾರೆ.

# ಪಾರ್ಕ್, ಗ್ರಂಥಾಲಯಕ್ಕೆ ಸರ್ಕಾರಿ ಜಾಗ ಮೀಸಲಿಡಿ

## ರವೀಂದ್ರನಗರ ಬಡಾವಣೆ ನಿವಾಸಿಗಳ ಸಭೆಯಲ್ಲಿ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ನಗರ ವೇಗವಾಗಿ ವಿಸ್ತರಿಸುತ್ತಿರುವ ಸಂದರ್ಭದಲ್ಲಿ ಮಕ್ಕಳಿಗೆ ಆಟದ ಮೈದಾನ, ಹಿರಿಯ ನಾಗರಿಕರಿಗೆ ಪಾರ್ಕ್ ಹಾಗು ಸಾರ್ವಜನಿಕರಿಗೆ ಗ್ರಂಥಾಲಯಗಳ ಕೊರತೆ ಹೆಚ್ಚಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿ ರವೀಂದ್ರನಗರ ನಿವಾಸಿಗಳು ಸರ್ಕಾರಿ ಖಾಲಿ ಜಾಗವನ್ನು ಯಾವುದೇ ಕಾರಣಕ್ಕೂ ಖಾಸಗಿ ಬಳಕೆಗೆ ನೀಡಬಾರದೆಂದು ಸಭೆಯಲ್ಲಿ ಒಕ್ಕೊರಲಿನಿಂದ ಆಗ್ರಹಿಸಿದರು.



ರವೀಂದ್ರನಗರ ಬಡಾವಣೆಯಲ್ಲಿ ಹಿರಿಯ ನಾಗರಿಕರ ವೇದಿಕೆ ವತಿಯಿಂದ ನಡೆದ ಸಭೆಯಲ್ಲಿ ಸ್ಥಳೀಯ ನಿವಾಸಿ ಶೈಲಜಕುಮಾರಿ ಅವರು ಮಾತನಾಡಿ, ರವೀಂದ್ರ ನಗರದಲ್ಲಿ ಮಕ್ಕಳಿಗೆ ಆಟವಾಡಲು ಮೈದಾನವೂ ಇಲ್ಲ, ಹಿರಿಯರಿಗೆ ಪಾರ್ಕ್ ಕೂಡ ಇಲ್ಲ. ಈ ಜಾಗದಲ್ಲಿ ಪಾರ್ಕ್, ಆಟದ ಮೈದಾನ ಹಾಗು ಗ್ರಂಥಾಲಯ ನಿರ್ಮಿಸಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಹುಡಾ ಅಧ್ಯಕ್ಷ ಪಟೇಲ್ ಶಿವಣ್ಣ ಅವರು ಮಾತನಾಡಿ, ಸ್ಥಳೀಯರ ಬೇಡಿಕೆ ನ್ಯಾಯ ಸಮ್ಮತವಾಗಿದೆ. ಮುಂದಿನ ದಿನಗಳಲ್ಲಿ ಪಾರ್ಕ್ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಮೊಗಣ್ಣಗೌಡ ಮಾತನಾಡಿ, ಸರ್ಕಾರಿ ಜಾಗಗಳು ಸಾರ್ವಜನಿಕರ ಸ್ವತ್ತಾಗಿದ್ದು, ಅವುಗಳನ್ನು ಉಳಿಸುವುದು ಎಲ್ಲರ ಜವಾಬ್ದಾರಿ. ಅಗತ್ಯವಿದ್ದರೆ ಕಾನೂನು ಹೋರಾಟಕ್ಕೂ ಸಿದ್ಧವೆಂದು ತಿಳಿಸಿದರು.

ರೈತ ಸಂಘದ ಮುಖಂಡರು ಮಾತನಾಡಿ, ಅಭಿವೃದ್ಧಿಯ ಹೆಸರಿನಲ್ಲಿ ಜಾಗಗಳು ಕಡಿಮೆಯಾಗುತ್ತಿರುವುದು ಆತಂಕಕಾರಿ. ಈ ಜಾಗವನ್ನು ಪಾರ್ಕ್ ಮತ್ತು ಆಟದ ಮೈದಾನವಾಗಿ ಉಳಿಸಬೇಕೆಂದು ಅವರು ಆಗ್ರಹಿಸಿದರು. ಹಿರಿಯ ನಾಗರಿಕರ ವೇದಿಕೆ ಕಾರ್ಯದರ್ಶಿ ಬಿ.ಕೆ. ಮಂಜುನಾಥ್ ಅವರು ಜಾಗದ ಇತಿಹಾಸ ವಿವರಿಸಿ, 1983ರಿಂದಲೇ ಈ ಜಾಗವನ್ನು ಉಳಿಸಲು ಹೋರಾಟ ನಡೆಯುತ್ತಿದೆ. 1985ರಿಂದ ಪ್ರಕರಣ ನ್ಯಾಯಾಲಯದಲ್ಲಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ವೈ.ಎಸ್. ವೀರಭದ್ರಪ್ಪ ಅವರು ಮಾತನಾಡಿ, ಈ ಸರ್ಕಾರಿ ಜಾಗವನ್ನು ಯಾವುದೇ ರೀತಿಯ ಅಕ್ರಮಕ್ಕೆ ಬಳಸಲು ಬಿಡುವುದಿಲ್ಲವೆಂದು ಸ್ಪಷ್ಟಪಡಿಸಿದರು. ಮಂಜುನಾಥ ದತ್ತ, ಹೆಮ್ಮಿಗೆ ಮೋಹನ್ ಸೇರಿ ಸಭೆಯಲ್ಲಿ ಅನೇಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿ ಸರ್ಕಾರಿ ಜಾಗ ಉಳಿಸುವ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

# ಕಾರ್ಮಿಕರೇ ದೇಶದ ಬೆನ್ನೆಲುಬು: ನ್ಯಾ.ನಾಗೇಂದ್ರ



• ಪ್ರಜೋದಯ ವರದಿ

**ಅರೇಹಳ್ಳಿ:** ಕಾರ್ಮಿಕರು ಈ ದೇಶದ ಬೆನ್ನೆಲುಬು. ಬೃಹತ್ ಕೈಗಾರಿಕೆಗಳಿಂದ ಹಿಡಿದು ಸಣ್ಣ ಕಾಫಿ ತೋಟಗಳವರೆಗಿನ ಅಭಿವೃದ್ಧಿಗೆ ಕಾರ್ಮಿಕರ ಕಠಿಣ ಪರಿಶ್ರಮವೇ ಮೂಲ ಕಾರಣ ಎಂದು ಸಿವಿಲ್ ನ್ಯಾಯಾಧೀಶರಾದ ನಾಗೇಂದ್ರ ಅವರು ಹೇಳಿದರು.

ಹೋಬಳಿ ವ್ಯಾಪ್ತಿಯ ವಾಟೇಹಳ್ಳಿ ಕಾಫಿ ಎಸ್ಟೇಟ್ ಆವರಣದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಉಚಿತ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದೆ ಕಾರ್ಮಿಕರು ದಿನಕ್ಕೆ ಸುಮಾರು 14 ಗಂಟೆಗಳ ಕಾಲ ದುಡಿಯಬೇಕಾದ ಕಠಿಣ ಪರಿಸ್ಥಿತಿ ಇತ್ತು. ಈ ಹಿನ್ನಲೆ ಹಲವು ಕಾರ್ಮಿಕ ಸಂಘಟನೆಗಳು ಆಡಳಿತ ಸರ್ಕಾರ, ಮಾಲೀಕರು ಹಾಗು ಉದ್ದಿಮೆದಾರರ ವಿರುದ್ಧ ವರ್ಷಗಳ ಕಾಲ ಹೋರಾಟ ನಡೆಸಿದವು. ಅಂತಿಮವಾಗಿ ಕೆಲಸದ ಅವಧಿಯನ್ನು 14 ಗಂಟೆಯಿಂದ 8 ಗಂಟೆಗೆ ಸೀಮಿತಗೊಳಿಸುವಲ್ಲಿ ಯಶಸ್ವಿಯಾದವು. ಆ ಐತಿಹಾಸಿಕ ಹೋರಾಟದ ನೆನಪಿಗಾಗಿ ಪ್ರತಿವರ್ಷ ಮೇ 1ರಂದು ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಆಚರಿಸಲಾಗುತ್ತಿದೆಂದು ತಿಳಿಸಿದರು.

ಸಮಾಜ ಹಾಗು ದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಪ್ರತಿಯೊಬ್ಬ ಕಾರ್ಮಿಕರ ಪರಿಶ್ರಮ, ತ್ಯಾಗ ಮತ್ತು ಬಲಿದಾನಗಳನ್ನು ಸ್ಮರಿಸುವ ದಿನ ಇದಾಗಿದೆ. ಕೆಲವು ಕಾರಣಗಳಿಂದ ಮೊದಲು ನಡೆಯಬೇಕಿದ್ದ ಕಾರ್ಯಕ್ರಮ ವಿಳಂಬವಾಗಿ ಇಂದು ಸುಸೂತ್ರವಾಗಿ ನೆರವೇರಿದೆ ಎಂದರು.

ತಾಲ್ಲೂಕು ಹಿರಿಯ ಕಾರ್ಮಿಕ ನಿರೀಕ್ಷರಾದ ವೈ.ಎಲ್.ಶಶಿಕಲಾ ಅವರು ಮಾತನಾಡಿ, ಪ್ರತಿಯೊಬ್ಬ ಕಾರ್ಮಿಕರೂ ತಮ್ಮ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕಲ್ಪಿಸಬೇಕು. ಯಾರಾದರೂ ಮಕ್ಕಳನ್ನು ಕಾಫಿ ತೋಟ, ಅಂಗಡಿ-ಮುಂಗಟ್ಟು ಅಥವಾ ಇತರೆ ಕ್ಷೇತ್ರಗಳಲ್ಲಿ ಬಾಲಕಾರ್ಮಿಕರಾಗಿ ಕೆಲಸಕ್ಕೆ ನೇಮಿಸಿಕೊಂಡು ಶಿಕ್ಷಣದಿಂದ ವಂಚಿತರನ್ನಾಗಿಸಿದರೆ ಅಂತಹವರ ಮಾಹಿತಿ ಇಲಾಖೆಗೆ ನೀಡಬೇಕು. ಮಕ್ಕಳಿಗೆ ಶಿಕ್ಷಣ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು.

ತಾಲ್ಲೂಕು ವಕೀಲರ ಸಂಘದ ಸದಸ್ಯ ಕುಮಾರ ಗುಪ್ತ, ಅರೇಹಳ್ಳಿ ಪೊಲೀಸ್ ಠಾಣೆಯ ಎಎಸ್‌ಐ ಮಂಜೇಗೌಡ, ಸಿಬ್ಬಂದಿ ಶರೀಫ್, ಕಾವ್ಯ, ವಾಟೇಹಳ್ಳಿ ಎಸ್ಟೇಟ್ ವ್ಯವಸ್ಥಾಪಕರಾದ ಪ್ರಭಾಕರ್, ಪ್ರತಾಪ್ ಶೆಟ್ಟಿ, ನಾಗೇಶ್ ಉಪಸ್ಥಿತರಿದ್ದರು.

# ಜಮೀರ್‌ಗೆ ಡಿಸಿಎಂ, ಕೆಎಂಶಿಗೆ ಸಚಿವ ಸ್ಥಾನ ನೀಡಲು ಪೂಜೆ

• ಪ್ರಜೋದಯ ವರದಿ

**ಬಾಣಾವರ:** ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡುವಂತೆ ಹಾಗು ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಸಿಗಲೆಂದು ಮುಸ್ಲಿಂ ಸಮಾಜದ ಮುಖಂಡರು ಬಾಣಾವರದ ಪ್ರಸಿದ್ಧ ಗವಿ ಹಜರತ್ ಸೈಯದ್ ಖಲಂದರ್ ಶಾ ಹುಸೇನಿ ದರ್ಗಾದಲ್ಲಿ ವಿಶೇಷ ಫಾತೇಹಾ ನೆರವೇರಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಮುಸ್ಲಿಂ ಸಮಾಜದ ಅಧ್ಯಕ್ಷ ಸಯ್ಯದ್ ರಹೀಂ ಅವರು, ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಎಲ್ಲಾ ಸಮುದಾಯಗಳನ್ನು ಪ್ರೀತಿ-ವಿಶ್ವಾಸದಲ್ಲಿ ಇಟ್ಟುಕೊಂಡು ಉತ್ತಮ ಆಡಳಿತ ನಡೆಸುತ್ತಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಅರಸೀಕೆರೆ ಜನರ ಬಹುಕಾಲದ ಆಸೆಯನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

ಮುಸ್ಲಿಂ ಸಮಾಜದ ಮುಖಂಡ ಮೊಹಮ್ಮದ್ ಇಲಿಯಾಜ್ ಅವರು ಮಾತನಾಡಿ, ಶಿವಲಿಂಗೇಗೌಡ ಅವರು ಅರಸೀಕೆರೆ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ಬಳಿಕ ಕ್ಷೇತ್ರ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಿದೆ. ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಂಡಿದೆ. ನದಿ ಮೂಲದ ನೀರನ್ನು ಅರಸೀಕೆರೆಗೆ ತರುವ ಮೂಲಕ ಈ ಭಾಗದ ಜನರ ಬಹುಮುಖ್ಯ ಬೇಡಿಕೆಯನ್ನು ಈಡೇರಿಸಿದ್ದಾರೆ. ಕ್ಷೇತ್ರದ ನಾಲ್ಕು ಭಾಗಗಳಲ್ಲೂ ವಸತಿ ಶಾಲೆಗಳನ್ನು ಆರಂಭಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದ್ದಾರೆ. ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ದೀಪ, ಚರಂಡಿ ಸೇರಿ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಿದ್ದಾರೆಂದು ಹೇಳಿದರು.

ರಾಜ್ಯದ ಸಮಸ್ಯೆಗಳ ಬಗ್ಗೆ ಆಳವಾದ ತಿಳುವಳಿಕೆ ಹೊಂದಿರುವ ಶಿವಲಿಂಗೇಗೌಡ ಅವರು ಮುಂದಿನ ಸಚಿವ ಸಂಪುಟ ರಚನೆಯಲ್ಲಿ ಅವರಿಗೆ ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನ ನೀಡಬೇಕು ಹಾಗು ಅಲ್ಪಸಂಖ್ಯಾತರ ಹಿರಿಯ ನಾಯಕ ಜಮೀರ್ ಅಹ್ಮದ್ ಖಾನ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಮನವಿ ಮಾಡಿದರು.

ವಕ್ಫ್ ಬೋರ್ಡ್ ಮಾಜಿ ನಿರ್ದೇಶಕ ಆರಿಫ್ ಜಾನ್ ಮಾತನಾಡಿ, ಶಿವಲಿಂಗೇಗೌಡ ಶಾಸಕರಾದ ನಂತರ ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದ ಅವರು, ಎಲ್ಲಾ ಸಮುದಾಯಗಳಿಗೂ ಸಮಾನ ಅವಕಾಶ ಕಲ್ಪಿಸುವ ನಾಯಕತ್ವ ಹೊಂದಿದ್ದಾರೆ. ಸಮುದಾಯ ಭವನ ಸೇರಿ ವಿವಿಧ ಸೌಲಭ್ಯಗಳನ್ನು ಒದಗಿಸುವ ಮೂಲಕ ಎಲ್ಲಾ ವರ್ಗದ ಜನರ ಪ್ರೀತಿ ಗಳಿಸಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಮುಖಂಡರಲ್ಲಿ ಮನವಿ ಮಾಡಿದರು.

ಮುಸ್ಲಿಂ ಮುಖಂಡರಾದ ಶಫಿ ಅಹಮದ್, ಮೊಹಮ್ಮದ್ ಇಬ್ರಾಹಿಂ, ಕೆ.ಸಿ.ಕಲೀಮ್, ಆದಿಲ್, ಯುವ ಮುಖಂಡರಾದ ಆಯುಬ್, ಅಪ್ಸರ್, ನಜೀರ್ ಸಾಬ್, ಅಬ್ರಾರ್ ಉಪಸ್ಥಿತರಿದ್ದರು.

## ಅರಕಲಗೂಡು ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಗ್ಯಾಸ್ ಏಜೆನ್ಸಿ ಮಾಲೀಕರು, ಗ್ರಾಹಕರ ಸಭೆ

# ನಿಗದಿತ ಅವಧಿಯೊಳಗೆ ಗ್ರಾಹಕರಿಗೆ ಸಿಲಿಂಡರ್ ಸರಬರಾಜು

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನಲ್ಲಿನ ನಾಲ್ಕು ಗ್ಯಾಸ್ ಏಜೆನ್ಸಿಗಳಿಂದ ಒಟ್ಟು 44ಸಾವಿರ ಗೃಹಬಳಕೆ ಅನಿಲ ಸಂಪರ್ಕ ಗ್ರಾಹಕರಿದ್ದು, ಎಲ್ಲಾ ಗ್ರಾಹಕರಿಗೂ ನಿಗದಿತ ಅವಧಿಯೊಳಗೆ ಸಿಲಿಂಡರ್ ಸರಬರಾಜು ಮನೆಯ ಬಳಿಯೆ ಮಾಡಬೇಕೆಂದು ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ಏಜೆನ್ಸಿ ಮಾಲೀಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ಶುಕ್ರವಾರ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಏಜೆನ್ಸಿ ಮಾಲೀಕರು, ಗ್ರಾಹಕರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಸರ್ಕಾರದ ಹೊಸ ಆದೇಶದ ಅನ್ವಯ ಗ್ರಾಮೀಣ ಭಾಗದ ಗ್ರಾಹಕರಿಗೆ 45 ದಿನಗಳ ನಂತರದ ಅವಧಿಯಲ್ಲಿ ಸಿಲಿಂಡರ್ ಸರಬರಾಜು ಮಾಡ ಬೇಕಿದೆ. ಅರಕಲಗೂಡು ಕೂಡ ಗ್ರಾಮೀಣ ಎಂದು ನಮೂದು ಆಗಿರುವ ಹಿನ್ನಲೆ ಪಟ್ಟಣ ಸೇರಿ ತಾಲ್ಲೂಕಿನ ಎಲ್ಲಾ ಗ್ಯಾಸ್ ಏಜೆನ್ಸಿಗಳ ವ್ಯಾಪ್ತಿಯ ಗ್ರಾಹಕರಿಗೆ ಈ ನಿಯಮ ಅನ್ವಯ ಆಗಲಿದೆ. ಕಳೆದ ಮಾರ್ಚ್‌ನಿಂದ ಏಪ್ರಿಲ್ ಅಂತ್ಯದವರೆಗೆ ಶೇ.80ರಷ್ಟು ಗೃಹ ಬಳಕೆ ಅನಿಲ ಸರಬರಾಜು ಆಗಿದೆ. ಈ ಸಲುವಾಗಿ ಪ್ರತಿ ಗ್ರಾಹಕರಿಗೆ ನಿಯಮಾನುಸಾರ 45 ದಿನಗಳ ನಂತದ ಸಿಲಿಂಡರ್ ದೊರೆಯಬೇಕಿದೆ. ಈ ಅವಧಿಯಲ್ಲಿ ಲೋಪವಾಗಿರುವುದಕ್ಕೆ ಏಜೆನ್ಸಿ ಮಾಲೀಕರ ಅವೈಜ್ಞಾನಿಕ ನಡವಳಿಕೆಯ ಧೋರಣೆಯೇ ಕಾರಣವೆಂದು ಬೇಸರ ವ್ಯಕ್ತಪಡಿಸಿದರು.

ತಾಲ್ಲೂಕಿನಲ್ಲಿ ಎರಡು ಹೆಚ್‌ಪಿ, ಎರಡು ಭಾರತ್ ಗ್ಯಾಸ್ ಏಜೆನ್ಸಿಗಳು ಅಧಿಕೃತವಾಗಿ ಕಾರ್ಯನಿರ್ವಹಿಸುತ್ತಿವೆ. ಕೊಣನೂರು ಮತ್ತು ಕೇರಳಾಪುರ ಹೆಚ್‌ಪಿ ಗ್ಯಾಸ್ ಏಜೆನ್ಸಿ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಸಿಲಿಂಡರ್ ಸರಬರಾಜು ಆಗುತ್ತಿದೆ. ಅರಕಲಗೂಡು, ಬರಗೂರು ಭಾರತ್ ಗ್ಯಾಸ್‌ಏಜೆನ್ಸಿ ವ್ಯಾಯಾಪ್ತಿಯಲ್ಲಿ ಮಾತ್ರ ಸಮಸ್ಯೆ ತಲೆದೂರಿದೆ. ಇಲ್ಲಿಗೂ ಕೂಡ ಸಮರ್ಪಕವಾಗಿ ಸಿಲಿಂಡರ್ ಸರಬರಾಜು ಆಗಿದ್ದರೂ ಕೂಡ ಏಕೆ ಹೀಗೆ ಗ್ರಾಹಕರನ್ನು ಏಜೆನ್ಸಿ ಕಚೇರಿ ಮುಂದೆ ಗಂಟೆಗಟ್ಟಲೆ ನಿಲ್ಲಿಸಿ ತೊಂದರೆ ಕೊಡುತ್ತಿದ್ದೀರಿ ಎಂದು ಮಾಲೀಕರನ್ನು ತರಾಟೆಗೆ ತೆಗೆದುಕೊಂಡರು.

ಇನ್ನೂ ಮುಂದೆ ಯಾವುದೇ ಗ್ರಾಹಕರನ್ನು ಏಜೆನ್ಸಿ ಮುಂದೆ ಬರುವುದಕ್ಕೆ ಹೇಳಬಾರದು. ಇಕೆವೈಸಿ, ವಿಳಾಸ ಬದಲಾವಣೆ ಇತರೆ ಸಮಸ್ಯೆ ಸರಿಪಡಿಸಿಕೊಳ್ಳಲು ಕರೆಸಿಕೊಳ್ಳಿ. 45 ದಿನಗಳ ನಂತರ ಬುಕಿಂಗ್ ಆಗಿರುವ ಗ್ರಾಹಕರಿಗೆ ಮನೆಯ ಬಳಿಯೇ ತೆರಳಿ ಬಿಲ್ ಹಾಗೂ ತೂಕ ಮಾಡಿ ಸಿಲಿಂಡರ್ ಕೊಡಬೇಕು. ಪ್ರಮುಖವಾಗಿ ಹಾಲಿ ಸಿಲಿಂಡರ್ ಸರಬರಾಜು ಮಾಡುತ್ತಿರುವ ವಾಹನ ಚಾಲಕರು, ಇತರೆ ಸಿಬ್ಬಂದಿ ಬದಲಾಯಿಸಿ, ಹೊಸಬರನ್ನು ಕೆಲಸಕ್ಕೆ ತೆಗದುಕೊಳ್ಳಬೇಕು. ಈ ಬಗ್ಗೆ ಇಲಾಖೆಗೆ ಮಾಹಿತಿ ನೀಡಿ. ಇಲ್ಲವಾದರೇ ಏಜೆನಿ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದೆಂದು ಎಚ್ಚರಿಸಿದರು.

ಆಹಾರ ಇಲಾಖೆ ಶಿರಸ್ತೇದಾರ್ ಮಂಜುನಾಥ್ ಅವರು ಮಾತನಾಡಿ, ಕಳೆದ ಎರಡೂವರೆ ತಿಂಗಳ ಅವಧಿಯಲ್ಲಿ ಅನಿಲ ಸರಬರಾಜು ಸಮಸ್ಯೆ ಕುರಿತು ಸಾಕಷ್ಟು ದೂರುಗಳು ಬಂದಿವೆ. ಈ ಸಲುವಾಗಿ ಅರಕಲಗೂಡು, ಬರಗೂರು ಏಜೆನ್ಸಿಗಳಿಗೆ ತೆರಳಿ ವಾಸ್ತವತೆಯನ್ನು ಮನವರಿಕೆ ಮಾಡಿಕೊಳ್ಳಲಾಗಿದೆ. ನಮ್ಮಲ್ಲಿ ಯಾವುದೇ ರೀತಿಯ ಸಮಸ್ಯೆ ಇಲ್ಲ. ಕೇವಲ ಏಜೆನ್ಸಿಗಳ ಮಾಲೀಕರು, ವಾಹನ ಚಾಲಕರಿಂದ ಗ್ರಾಹಕರಿಗೆ ತೊಂದರೆ ಉಂಟು ಮಾಡಲಾಗಿದೆ. ಇನ್ನೂ ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಬೇಕು. ನಿಗದಿತ ಅವಧಿಯಲ್ಲಿ ಗ್ರಾಹಕರ ಮನೆಯ ಬಾಗಿಲಿಗೆ ಹೋಗಿ ಸಿಲಿಂಡರ್ ನೀಡಬೇಕು. ಪ್ರಮುಖವಾಗಿ ಹೋಟೆಲ್, ರಸ್ತೆ ಬದಿ ಅಂಗಡಿಗಳು, ಮದುವೆ ಇತರೆ ಕಾರ್ಯಗಳಿಗೆ ಮನೆ ಬಳಕೆ ಸಿಲಿಂಡರ್ ಬಳಕೆ ಮಾಡುತ್ತಿರುವುದು ಕಂಡು ಬಂದಿದೆ. ಇಂತಹ ಗ್ರಾಹಕರು ಕಡ್ಡಾಯವಾಗಿ ವಾಣಿಜ್ಯ ಬಳಕೆ ಸಿಲಿಂಡರ್ ಪಡೆದು ಬಳಸ ಬೇಕು. ಈ ಕುರಿತು ಸಾರ್ವಜನಿಕ ವಲಯದಲ್ಲಿ ಜಾಗೃತಿ ಮೂಡಿಸಲಾಗುವುದೆಂದು ಹೇಳಿದರು.

ಕರವೇ ಗೌರವಾಧ್ಯಕ್ಷ ಎನ್.ರವಿಕುಮಾರ್ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಗ್ಯಾಸ್ ಸಮಸ್ಯೆ ತಲೆದೂರಿರುವ ಕುರಿತು ಮಾಧ್ಯಮಗಳ ಮೂಲಕ ತಾಲ್ಲೂಕು ಆಡಳಿತದ ಗಮನವನ್ನು ಸೆಳೆಯಲಾಗಿತ್ತು. ಈ ಬಗ್ಗೆ ತಹಶೀಲ್ದಾರ್, ಆಹಾರ ಇಲಾಖೆ ಅಧಿಕಾರಿ ತ್ವರಿತವಾಗಿ ಏಜೆನ್ಸಿ ಮಾಲೀಕರು, ಸಾರ್ವಜನಿಕರು, ಸಂಘ-ಸಂಸ್ಥೆಗಳ ಮುಖಂಡರ ಸಭೆ ಕರೆದು ಗ್ಯಾಸ್ ಸಮಸ್ಯೆ ನಿವಾರಣೆಗೆ ಸ್ಪಂದಿಸಿರುವುದನ್ನು ಗ್ರಾಹಕರ ಪರವಾಗಿ ಧನ್ಯವಾಗಳನ್ನು ಸಲ್ಲಿಸುತ್ತೇನೆ. ಮುಂದೆ ಗ್ರಾಹಕರಿಗೆ ತೊಂದರೆ ಆಗದಂತೆ ಸಿಲಿಂಡರ್ ವಿತರಣೆ ಮಾಡಿದರೆ ಸಾಕು ಎಂದು ತಿಳಿಸಿದರು.

ಸಭೆಯಲ್ಲಿ ರೈತ ಸಂಘದ ಅಧ್ಯಕ್ಷ ಭುವನೇಶ್, ಕರವೇ ಮುಖಂಡರಾದ ಜಿಮ್ ಸೋಮು, ಅಕ್ಮಲ್ ಪಾಷ, ಗ್ಯಾಸ್ ಏಜೆನ್ಸಿ ಮಾಲೀಕರಾದ ಮೋಹನ್, ರಾಜೇಶ್ ಇತರರು ಉಪಸ್ಥಿತರಿದ್ದರು.

# ಸುಳ್ಳು ಆರೋಪಗಳಿಂದ ಮಾನಹಾನಿಗೆ ಯತ್ನ

• ಪ್ರಜೋದಯ ವರದಿ

**ಸಕಲೇಶಪುರ:** ತಮ್ಮ ವಿರುದ್ಧ ಸುಳ್ಳು, ಆಧಾರರಹಿತ ಆರೋಪಗಳನ್ನು ಮಾಡಿ ವೈಯಕ್ತಿಕ ಮತ್ತು ವೃತ್ತಿಪರ ಗೌರವಕ್ಕೆ ಧಕ್ಕೆ ತರಲು ಯತ್ನಿಸುತ್ತಿರುವುದರ ಜೊತೆಗೆ ಸಮಾಜದಲ್ಲಿ ಕೋಮು ಸೌಹಾರ್ದತೆ ಕೆಡಿಸಲು ಸಂಚು ರೂಪಿಸಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ ವೃತ್ತ ನಿರೀಕ್ಷಕರಿಗೆ ದೂರು ನೀಡುವುದಾಗಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ, ಪುರಸಭೆ ಮಾಜಿ ಅಧ್ಯಕ್ಷ ಮುಫೀಜ್ ಅವರು ತಿಳಿಸಿದರು.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೂ ಹಿತರಕ್ಷಣಾ ವೇದಿಕೆ ಪದಾಧಿಕಾರಿಗಳು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ತಮ್ಮ ವಿರುದ್ಧ ದ್ವೇಷಪೂರಿತ ಆರೋಪಗಳನ್ನು ಮಾಡಲಾಗಿದೆ. ದೂರಿನಲ್ಲಿ ಉಲ್ಲೇಖಿಸಿರುವ ಕಾಫಿ ತೋಟಕ್ಕೂ ತಮ್ಮ ಹೋಂಸ್ಟೇ ಹಾಗು ಜಾಗಕ್ಕೂ ಯಾವುದೇ ಸಂಬಂಧ ಇಲ್ಲ. ಬೇರೆಡೆ ನಡೆದಿದೆ ಎನ್ನಲಾದ ಘಟನೆಯನ್ನು ತಮ್ಮ ಜಾಗಕ್ಕೆ ಸಂಪರ್ಕಿಸಿ ಸುಳ್ಳು ಕಥೆ ಸೃಷ್ಟಿಸಲಾಗಿದೆ. ಈ ಸಂಬಂಧ ಹಿಂದೂ ಹಿತರಕ್ಷಣಾ ವೇದಿಕೆಯ ಮಂಜುನಾಥ ಕಬ್ಬಿನಗದ್ದೆ, ಶಿವಾನಂದ, ರಘು ಸಕಲೇಶಪುರ ಸೇರಿ ಇತರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ತಮ್ಮ ಹೋಂಸ್ಟೇ ಜಾಗದ ಗಡಿ ಗುರುತು, ಆರ್‌ಟಿಸಿ ಹಾಗು ನಕ್ಷೆಯ ಅಧಿಕೃತ ದಾಖಲೆಗಳನ್ನು ಪೊಲೀಸರಿಗೆ ಸಾಕ್ಷಿಯಾಗಿ ಸಲ್ಲಿಸಿದ್ದೇನೆ. ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದೇನೆ ಅಥವಾ ವಾಹನ ಸಂಚಾರಕ್ಕೆ ತಡೆಯೊಡ್ಡಿದ್ದೇನೆಂಬ ಆರೋಪಗಳು ಸತ್ಯಕ್ಕೆ ದೂರವಾದವು. ಕುಶಾಲನಗರ ಬಡಾವಣೆಗೆ ದನದ ಮಾಂಸ ಹಂಚುತ್ತಿದ್ದೇನೆಂಬ ಆರೋಪ ಸಮಾಜದಲ್ಲಿ ಕೋಮು ದ್ವೇಷ ಸೃಷ್ಟಿಸುವ ಉದ್ದೇಶದಿಂದ ಹೆಣೆದಿರುವ ಸುಳ್ಳು ಎಂದು ಆರೋಪಿಸಿದರು. ದಲಿತ ಮುಖಂಡ ಹೆನ್ನಲಿ ಶಾಂತರಾಜ್, ಕಾಂಗ್ರೆಸ್ ಮುಖಂಡ ಹಸೆನಾರ್ ಆನೆಮಹಾಲ್, ಅಯಾಜ್ ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK